# ಶ್ರೀ ರಾಮಚಂದ್ರ ಮಿಷನ್
# ಎಖೋಸ್ ಇಂಡಿಯ

ಸೆಪ್ಟಂಬರ್ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 5


ಪ್ರಿಯ ಸಹೋದರ, ಸಹೋದರಿಯರೇ,

ಪ್ರಣಾಮಗಳು

ತಿರುಪ್ಪೂರ್‌ನಲ್ಲಿ ಗುರುಗಳ 83 ನೆಯ ಜನ್ಮದಿನದ ಆಚರಣೆಯ ಸಂದರ್ಭದಲ್ಲಿ ನಿಮ್ಮೆಲ್ಲರನ್ನು ಎಖೋಸ್ ಇಂಡಿಯಾದ ಮಳಿಗೆಯಲ್ಲಿ ಭೇಟಿಮಾಡಿದುದು ಬಹಳ ಸಂತೋಷದ ಸಂದರ್ಭವಾಗಿದ್ದಿತು.

ಎಖೋಸ್ ಇಂಡಿಯಾ ವಾರ್ತಾಪತ್ರಕ್ಕೆ ವಿವಿಧ ಭಾಷೆಗಳ 350ಕ್ಕೂ ಅಧಿಕ ಅಭ್ಯಾಸಿಗಳು ಸದಸ್ಯರಾಗಿದ್ದರಿಂದ ನಮಗೆ ಸಂತೋಷವಾಗಿದೆ.

ಎಖೋಸ್ ಇಂಡಿಯಾದ ಸಂಯೋಜಕರಿಗಾಗಿ ಹಾಗೂ ಸ್ವಯಂಸೇವಕರಿಗಾಗಿ ಒಂದು ತುರ್ತುಸಭೆಯನ್ನು ಆಯೋಜಿಸಲಾಗಿತ್ತು. ಇದರಿಂದ ಸಂಯೋಜನೆಯ ಹಾಗೂ ವಾರ್ತಾಪತ್ರಿಕೆಯ ವಿತರಣೆಯ ಕುರಿತಾಗಿ ಇರುವ ಸಮಸ್ಯೆಗಳ ಬಗೆಗೆ ಕೇಂದ್ರೀಕರಿಸಲು ಸಹಾಯವಾಯಿತು.

ಸಂಯುಕ್ತ ರಾಷ್ಟ್ರಗಳ ಅಂತರರಾಷ್ಟ್ರೀಯ ಯುವ ದಿನದ ಸ್ಮರಣಾರ್ಥವಾಗಿ ಆಗಸ್ಟ್ 12ರಂದು ನಡೆದ ವಾರ್ಷಿಕ ರಾಷ್ಟ್ರೀಯ ಪ್ರಬಂಧ ವಿಚಾರವಾಗಿ ದೇಶದಲ್ಲೆಡೆಯ ಮಾಹಿತಿಗಳನ್ನು ಈ ಸಂಚಿಕೆಯು ಒಳಗೊಂಡಿದೆ.

ಇಂದೋರ್‌ನಲ್ಲಿ (ಮ.ಪ್ರ) ನಡೆದ ಪ್ರಶಿಕ್ಷಕರ ಸಭೆ, ಚಿತ್ತನೂರ್‌ನಲ್ಲಿ (ಆಂ.ಪ್ರ)ಸಂಸ್ಥೆಯ ಕಾರ್ಯ ಚಟುವಟಿಕೆಗಳ ಆರಂಭ, ರಾಮ್‌ಗಢ‌ದಲ್ಲಿ ಧ್ಯಾನಮಂದಿರದ ಉದ್ಘಾಟನೆ (ಜಾರ್ಖಂಡ್), ವಿವಿಧ ವಲಯಗಳಲ್ಲಿ ನಡೆದ ಮುಕ್ತ ಸಭೆಗಳು ಹಾಗೂ ಅಭ್ಯಾಸಿ ತರಬೇತಿ ಕಾರ್ಯಕ್ರಮಗಳ ಕುರಿತ ವಲಯದ ಮಾಹಿತಿಗಳನ್ನು ಈ ಸಂಚಿಕೆಯು ಒಳಗೊಂಡಿದೆ.


ನಮ್ಮ ಎಲ್ಲ ಓದುಗರು ಇದರ ಓದುವಿಕೆಯನ್ನು ಆನಂದಿಸಲಿ ಹಾಗೂ ಗುರುಗಳು ಯಾವಾಗಲೂ ಹೇಳುವಂತೆ "ಓದಿ, ಆನಂದಿಸಿ" ಮತ್ತು "ಮಾಡಿ, ಅನುಭವಿಸಿ" ಎಂಬುದನ್ನು ಅನುಸರಿಸಲಿ ಎಂದು ಆಶಿಸುತ್ತೇವೆ.

ಆತ್ಮೀಯ ಶುಭಾಶಯಗಳೊಂದಿಗೆ,
ಸಂಪಾದಕ ತಂಡ.

## ಚೆನ್ನೈ



ಪೂಜ್ಯ ಗುರುಗಳು ತಿರುಪ್ಪೂರ್‌ನಲ್ಲಿ ನಡೆದ ತಮ್ಮ ಜನ್ಮದಿನದ ಆಚರಣೆಯ ನಂತರ ಆಗಸ್ಟ್ 3ರಂದು ಚೆನ್ನೈಗೆ ಮರಳಿಬಂದರು. ವಿಮಾನ ನಿಲ್ದಾಣದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಮೇಳೈಸಿದ್ದ ಅಭ್ಯಾಸಿಗಳಿಂದ ಅತ್ಯಂತ ಆತ್ಮೀಯವಾಗಿ ಗುರುಗಳು ಬರಮಾಡಿಕೊಳ್ಳಲ್ಪಟ್ಟರು. ಯಾವುದೋ ಕಾರಣದಿಂದಾಗಿ ಗುರುಗಳು ಸುಮಾರು ದೂರ ನಡೆದುಕೊಂಡೇ ಹೋಗಬೇಕಾಯಿತು. ಹಾಗೂ ಕಾರಿನವರೆಗಿನ ಆ ಕಾಲ್ನಡಿಗೆಯನ್ನು ಗುರುಗಳು ಆನಂದಿಸಿದರು. ಇದು ಅವರ ಹಾದಿಯಲ್ಲಿ ಬರುವ ಯಾವುದೇ ಸಮಸ್ಯೆಗೆ, ಅದು ಎಷ್ಟೇ ಚಿಕ್ಕದಿರಲಿ ಅಥವಾ ದೊಡ್ಡದಿರಲಿ, ಹೇಗೆ ಅವರು ತಕ್ಷಣವೇ ಒಗ್ಗಿಕೊಳ್ಳುತ್ತಾರೆಂಬುದು ಎಲ್ಲಾ ಅಭ್ಯಾಸಿಗಳಿಗೆ ಪಾಠವಾಗಿದೆ.



"ನೆನಪಿನ ಓಣಿಯೊಳಗೆ"ಎಂಬ ಪುಸ್ತಕದಲ್ಲಿ ಜಬ್ಬಲ್‌ಪುರದ ತಮ್ಮ ಬಾಲ್ಯದ ದಿನಗಳ ಬಗ್ಗೆ ಹಾಗೂ ಕ್ರೈಸ್ಟ್ ಚರ್ಚ್ ಸ್ಕೂಲ್‌ನ ಶಾಲಾದಿನಗಳ ಬಗ್ಗೆ ಗುರುಗಳ ಬಹಳ ಆಕರ್ಷಣೀಯವಾಗಿ ಬರೆದಿದ್ದಾರೆ. ತಮ್ಮ ಖಾಸಗಿ ಸಂಭಾಷಣೆಗಳಲ್ಲಿ ಆ ದಿನಗಳನ್ನು ಆಗಾಗ ನೆನಪಿಸಿಕೊಳ್ಳುತ್ತಿರುತ್ತಾರೆ. ಆದುದರಿಂದ ತಾವು ಕಲಿತ ಶಿಕ್ಷಣ ಸಂಸ್ಥೆಯ ಈಗಿನ ಪ್ರಾಂಶುಪಾಲರು ಆಗಸ್ಟ್ 4ರಂದು ಅವರನ್ನು ಭೇಟಿ ಮಾಡಿದುದು ಅವರಿಗೆ ಅತ್ಯಂತ ಸಂತೋಷದ ವಿಷಯವಾಗಿತ್ತು.



ಜಬ್ಬಲ್‌ಪುರದ ಕ್ರೈಸ್ಟ್ ಚರ್ಚ್ ಬಾಯ್ಸ್ ಸೀನಿಯರ್ ಸೆಕೆಂಡರಿ ಸ್ಕೂಲ್‌ನ ಪ್ರಾಂಶುಪಾಲರಾದ ಶ್ರೀ ಎಲ್. ಮಾಥ್ಯೂರವರು ಉತ್ತರ ಭಾರತದ ಚರ್ಚ್‌ನ ಮತ್ತೊಬ್ಬ ಗೌರವಾನ್ವಿತರಾದ, ಜಬ್ಬಲ್‌ಪುರ ಜಿಲ್ಲೆಯ ಸಿ.ಎನ್.ಐ ಶಾಲೆಗಳ ಅಧ್ಯಕ್ಷರಾದ ಬಿಷಪ್. ಡಾ.ಪಿ.ಸಿ.ಸಿಂಗ್ ಅವರನ್ನು ಜೊತೆಗೂಡಿದ್ದರು. ಇವರೊಂದಿಗೆ ಗುರುಗಳು ಜಬ್ಬಲ್‌ಪುರದ ತಮ್ಮ ಶಾಲಾದಿನಗಳನ್ನು ನೆನೆಯುತ್ತಾ ಕೆಲಕಾಲ ಕಳೆದರು. ಪ್ರೇಕ್ಷಕರು ಆಶ್ರಮವನ್ನೆಲ್ಲಾ ವೀಕ್ಷಿಸಿ ಅಲ್ಲಿಯ ದಿವ್ಯ ಪರಿಸರವನ್ನು ಗಮನಿಸಿದರು ಹಾಗೂ ಅಲ್ಲಿರುವುದಕ್ಕೆ ಅವರ ಸಂತೋಷವನ್ನು ವ್ಯಕ್ತಪಡಿಸಿದರು.



ಆಗಸ್ಟ್ 5, 'ರಕ್ಷಾ ಬಂಧನ' ದಿನದಂದು ಅನೇಕ ಅಭ್ಯಾಸಿಗಳು, ಮಕ್ಕಳು ಅವರ ಕೈಗೆ ರಾಖಿಗಳನ್ನು ಕಟ್ಟಿದರು ಹಾಗೂ ಗುರುಗಳು ಯಾರಿಗೂ ನಿರಾಶೆ ಮಾಡದೆ ಸಂತೋಷದಿಂದ ಎಲ್ಲವನ್ನೂ ಸ್ವೀಕರಿಸಿದರು. ಸಂಜೆ ಕೂಡ ಅವರ "ಗಾಲ್ಫ್‌ಕಾರ್ಟ್" ಪ್ರಯಾಣದ ಸಮಯದಲ್ಲೂ ಅನೇಕ ಅಭ್ಯಾಸಿಗಳು ಸಿಹಿತಿಂಡಿಗಳನ್ನು ಕೊಡಲು ಹಾಗೂ ರಾಖಿಯನ್ನು ಕಟ್ಟಲು ಸಾಲಾಗಿ ನಿಂತಿದ್ದರು. ಆಗಸ್ಟ್ 13ರಿಂದ 16ರವರೆಗೆ ಮುಂದುವರೆದ ವಾರಾಂತ್ಯದಲ್ಲಿ ಅಭ್ಯಾಸಿಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಚೆನ್ನೈಗೆ ಬಂದಿದ್ದರು. 13 "ಕೃಷ್ಣ ಜನ್ಮಾಷ್ಟಮಿ" ದಿನವಾಗಿದ್ದಿತು, ಹಾಗೂ ಗುರುಗಳು ಅಲ್ಲಿದ್ದ ಎಲ್ಲಾ ಅಭ್ಯಾಸಿಗಳ ಸಂತೋಷಕ್ಕೆ ಧ್ಯಾನಮಂದಿರದಲ್ಲಿ ಸತ್ಸಂಗವನ್ನು ನಡೆಸಿಕೊಟ್ಟರು. ಆಗಸ್ಟ್ 15 ಭಾರತದ ಸ್ವಾತಂತ್ರ್ಯ ದಿನವಾದ್ದರಿಂದ ಸ್ಥಳೀಯ ರಜಾದಿನವಾಗಿದ್ದಿತು. ಗುರುಗಳು ಧ್ಯಾನಮಂದಿರದಲ್ಲಿ ಸತ್ಸಂಗವನ್ನು ನಡೆಸಿಕೊಟ್ಟರು. ಸತ್ಸಂಗದ ನಂತರ ಕೊಳಲು ಪ್ರವೀಣರಾದ ಸಹೋದರ ಶಶಾಂಕ್‌ರವರು ಗುರುಗಳ ಕಾಟೇಜ್‌ನಲ್ಲಿ ತಮ್ಮ ಕೊಳಲನ್ನು ನುಡಿಸುವುದರ ಮೂಲಕ ಬೆರಗುಗೊಳಿಸಿದರು. ಅದೊಂದು ಅತ್ಯುತ್ತಮವಾದ ಕಾರ್ಯಕ್ರಮವಾಗಿತ್ತು ಹಾಗೂ ಗುರುಗಳು ಅದನ್ನು ತುಂಬಾ ಆನಂದಿಸಿದರು.

ಆಗಸ್ಟ್ 16ರಂದು ಗುರುಗಳು ಧ್ಯಾನಮಂದಿರಕ್ಕೆ ಬೆಳಗ್ಗೆ 7:10ಕ್ಕೆ ಬಂದರು ಹಾಗೂ ತಾಳ್ಮೆಯಿಂದ ಅಭ್ಯಾಸಿಗಳಿಗಾಗಿ ಕಾಯುತ್ತಿದ್ದರು. ಅವರು ಸತ್ಸಂಗ ಶುರು ಮಾಡುವುದಕ್ಕೆ 7:25ರವರೆಗೆ ಕಾಯಬೇಕಾಯಿತು. ಈ ಮುಂದಿನದನ್ನು ಒತ್ತಿಹೇಳಲು ಒಂದು ಪ್ರಕಟಣೆಯನ್ನು ಮಾಡಲಾಯಿತು: "ಅಭ್ಯಾಸಿಯಾಗುವುದು ಒಂದು ಮಹಾ ವರದಾನ; ಸತ್ಸಂಗದಲ್ಲಿ ಪಾಲ್ಗೊಳ್ಳುವುದು ಅದಕ್ಕಿಂತಲೂ ಉತ್ತಮ ವರದಾನ; ಗುರುಗಳ ಸಮ್ಮುಖದಲ್ಲಿ ಸತ್ಸಂಗದಲ್ಲಿ ಪಾಲ್ಗೊಳ್ಳುವುದು ಯಾವುದಕ್ಕೂ ಸರಿಸಾಟಿಯಿಲ್ಲದ ಉತ್ಕೃಷ್ಟ ವರದಾನ. ಗುರುಗಳು (ಅಥವಾ ಪ್ರಶಿಕ್ಷಕರು)





ಬರುವ ಕನಿಷ್ಟಪಕ್ಷ 30 ನಿಮಿಷಗಳು ಮೊದಲೇ ಧ್ಯಾನಮಂದಿರಕ್ಕೆ ಬರುವುದು ಅಭ್ಯಾಸಿಯ ಕರ್ತವ್ಯ. ಗುರುಗಳು ಅಥವಾ ಪ್ರಶಿಕ್ಷಕರನ್ನು ಕಾಯಿಸುವುದು ಸಭ್ಯಾಚಾರವಲ್ಲ. ಸತ್ಸಂಗದಲ್ಲಿ ನಮಗೆ ದಯಪಾಲಿಸುತ್ತಿರುವ ಈ ದೈವೀ ವರದಾನವನ್ನು ಸ್ವೀಕರಿಸಲು ಮೊದಲೇ ಬಂದು ನಮ್ಮನ್ನು ನಾವು ಸಿದ್ಧಪಡಿಸಿಕೊಳ್ಳಬೇಕು; ಈ ಪ್ರಕಟಣೆಯ ಪರಿಣಾಮವು ನಂತರದ ವಾರದಂದು ಗುರುಗಳ ಆಗಮನಕ್ಕೆ ಮುನ್ನವೇ ಧ್ಯಾನಮಂದಿರವು ಪೂರ್ತಿಯಾಗಿ ಆವರಿಸಲ್ಪಡುವುದರ ಮೂಲಕ ಗಮನಕ್ಕೆ ಬಂದಿತು.

ಹಂದಿಜ್ವರದ ಅಬ್ಬರದ ಕಾರಣದಿಂದಾಗಿ ಗುರುಗಳ ಪ್ರಯಾಣದ ಯೋಜನೆಗಳು ಹಾಗೆಯೇ ನಿಂತಿವೆ. ಭಾರತದ ಎಲ್ಲೆಡೆಯಿಂದ ಅಭ್ಯಾಸಿಗಳು ಅವರನ್ನು ನೋಡಲು ಬರುತ್ತಿದ್ದಾರೆ, ಇದರಿಂದಾಗಿ ಗುರುಗಳು ಕಾರ್ಯನಿರತರಾಗಿದ್ದಾರೆ. ಅವರ ಆಡಳಿತದ ಕೆಲಸಗಳು, ಪ್ರಶಿಕ್ಷಕರನ್ನು ತಯಾರು ಮಾಡುವುದು, ಕಾಟೇಜಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುವ ಅಭ್ಯಾಸಿಗಳನ್ನು ಬರಮಾಡಿಕೊಳ್ಳುವುದು .... ಹೀಗೆ ಪಟ್ಟಿಯು ಮುಗಿಯುವುದಿಲ್ಲ. ಅವರ ಕೆಲಸವು ನಿರಂತರವಾಗಿ ಸಾಗುತ್ತಲೇ ಇರುತ್ತದೆ ಹಾಗೂ ಅವರಿಗಾಗಿ (ಹಾಗೆಯೇ ಜೊತೆಯಲ್ಲಿರುವವರಿಗೂ) ಅವರು ನಿಗದಿ ಪಡಿಸಿಕೊಂಡಿರುವ ಮಾನದಂಡಗಳು ಬಹಳ ಮಾದರಿಯಾಗಿವೆ. ಅವರ ಕೆಲಸದಲ್ಲಿನ ನೀತಿಗಳು, ಹಾಗೂ ತಾವು ಮಾಡುವ ಪ್ರತಿ ಸಣ್ಣ ಕಾರ್ಯಗಳಲ್ಲಿಯೂ ವಹಿಸುವ ಜಾಗ್ರತೆ ಅವುಗಳಿಂದ ನಾವು ಕಲಿಯಬೇಕಾದುದು ಬಹಳಷ್ಟಿದೆ. ಗುರುಗಳ ಅಭ್ಯಾಸಿಗಳೊಂದಿಗಿನ ಅನೌಪಚಾರಿಕ ಸಂದರ್ಭಗಳ ಕೆಲವು ಮುಖ್ಯ ವಿಷಯಗಳು.

1. ಗುರುಗಳು "ಟೈಮ್ಸ್ ಆಫ್ ಇಂಡಿಯಾ"ದಲ್ಲಿ (ಚೆನ್ನೈ ಪ್ರಕಟಣೆ, ದಿನಾಂಕ 23 ಆಗಸ್ಟ್, ಭಾನುವಾರ) ಚೆನ್ನೈ ಉಚ್ಚ ನ್ಯಾಯಾಲಯವು ಕಾರು ಅಥವಾ ದ್ವಿಚಕ್ರವಾಹನಗಳು ಹಾಗೂ ಮೊಬೈಲ್ ಫೋನನ್ನು (ಒಂದು ವೇಳೆ ಚಾಲಕ ಅಥವಾ ಸವಾರನು ಚಾಲನೆ ಮಾಡುತ್ತಿರುವಾಗ ಅಥವಾ ಸವಾರಿ ಮಾಡುತ್ತಿರುವಾಗ ಮೊಬೈಲ್‌ಫೋನ್ ಬಳಸುವುದು ಕಂಡರೆ) ಸ್ವಾಧೀನಪಡಿಸಿಕೊಳ್ಳಲು ಅಧಿಕಾರಯುಕ್ತವಾಗಿದೆ ಎಂಬುದರ ಬಗೆಗಿನ ಲೇಖನವನ್ನು ಓದುತ್ತಾ "ಚಾಲನೆ ಮಾಡುತ್ತಿರುವಾಗ ಮೊಬೈಲ್ ಫೋನ್ ಬಳಸುವುದನ್ನು ನಾನು ಎಲ್ಲರಿಗೂ ನಿಷೇಧಿಸುತ್ತೇನೆ, ಹಾಗೇನಾದರೂ ಅವರು ಆ ಕರೆಯನ್ನು ಸ್ವೀಕರಿಸಬೇಕೆಂದರೆ ಅವರು ಅವರ ವಾಹನವನ್ನು ರಸ್ತೆಯ ಬದಿಗೆ ತೆಗೆದುಕೊಂಡು ನಿಲ್ಲಿಸಿ ನಂತರ ಸ್ವೀಕರಿಸಬಹುದು" ಎಂದು ಖಡಾಖಂಡಿತವಾಗಿ ಹೇಳಿದರು.

2. ಕ್ಷಮಿಸುವುದು ಹಾಗೂ ಮರೆಯುವುದು :– "ಯಾರಾದರೂ ತಾವು ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಟ್ಟರೆ ಆ ವ್ಯಕ್ತಿಯನ್ನು ನೀವು ಕ್ಷಮಿಸಿ, ಮರೆಯುತ್ತೀರಾ?" ಎಂಬ ಒಬ್ಬ ಅಭ್ಯಾಸಿಯ ಪ್ರಶ್ನೆಗೆ ಉತ್ತರಿಸುತ್ತಾ ಗುರುಗಳು "ನಾನು ಯಾವಾಗಲೂ ಆ ತಕ್ಷಣವೇ ಕ್ಷಮಿಸುತ್ತೇನೆ; ಆದರೆ ಮರೆಯುವುದು ಸಂಪೂರ್ಣವಾಗಿ ಆ ವ್ಯಕ್ತಿಯ ಕೈಯಲ್ಲಿದೆ. ಆ ವ್ಯಕ್ತಿಯು ಆ ನೆನಪನ್ನು ಅವನೊಂದಿಗೇ ಇರಿಸಿಕೊಂಡಿರುವವರೆಗೆ ಮರೆಯುವುದು ನನಗೆ ಅಸಾಧ್ಯ" ಎಂದು ಹೇಳಿದರು.

3.ಶಿಸ್ತಿನ ಬಗೆಗೆ: "ಎಲ್ಲಾ ಶಿಸ್ತು. ಸ್ವಇಚ್ಛೆಯಿಂದ ಬರುತ್ತದೆ; ಎಲ್ಲಾ ಅಶಿಸ್ತು ಸ್ವತೃಪ್ತಿಯಿಂದ ಬರುತ್ತದೆ".

## ಪ್ರಕಟನೆಗಳು



### ಆಹಾರವನ್ನು ಸ್ವೀಕರಿಸುವ ಮುನ್ನ ಪ್ರಾರ್ಥನೆಗೆ ಗುರುಗಳ ವಿನಂತಿ.

ಮೊಲಿನಾ ಆಶ್ರಮ, ಆಗಸ್ಟ್ 2003.

"ನಾವೆಲ್ಲರೂ ಆಹಾರ ಮತ್ತು ಅದರ ಪರಿಶುದ್ಧತೆಯ ಬಗೆಗೆ ಇನ್ನೂ ಚಿಂತಾಕ್ರಾಂತರಾಗಿದ್ದೇವೆ. ನಾನು ನಾವು ತಿನ್ನುವ ಆಹಾರದ ಜೈವಿಕ ಪರಿಶುದ್ಧತೆಯು ಅಂದರೆ. ಇದರಿಂದ ನಾವು ಅಸ್ವಸ್ಥರಾಗುವುದಿಲ್ಲವಲ್ಲ ಆ ಪರಿಶುದ್ಧತೆಯ ಬಗ್ಗೆ ಮಾತನಾಡುತ್ತಿಲ್ಲ, ಅದರ ಆಧ್ಯಾತ್ಮಿಕ ಪಾವಿತ್ರ್ಯತೆಗೆ ಬಗೆಗೆ. ಬಾಬೂಜಿಯವರು ಎಲ್ಲವೂ ರುಚಿಕರ ಹಾಗೂ ಅಧ್ಯಾತ್ಮಿಕತೆಗೆ ಪೂರಕವಾಗಿರುವ ಹಾಗೆ ಮಾಡಿಕೊಳ್ಳುವ ವಿಧಾನವನ್ನು ತಿಳಿಸಿಕೊಟ್ಟಿದ್ದಾರೆ. ಅವರು ಹೇಳಿದ್ದಾರೆ; ತಿನ್ನುವ ಮೊದಲು ಒಂದು ಕ್ಷಣ ಧ್ಯಾನಿಸಿ ಹಾಗೂ ಅದನ್ನು ಗುರುಗಳಿಗೆ ಅರ್ಪಿಸಿ. ನಾನು ಯಾರೂ ಸಹ ಹಾಗೆ ಮಾಡುತ್ತಿರುವುದನ್ನು ಕಾಣುತ್ತಿಲ್ಲ, ಒಬ್ಬರೂ ಇಲ್ಲ..... ಆದುದರಿಂದ ಅದನ್ನು ಪ್ರಯತ್ನಿಸಿ. ಅದು ಬರೀ ಸ್ಯಾಂಡ್‌ವಿಚ್ ಆಗಿರಲಿ ಅಥವಾ ಬಿಸ್ಕೇಟ್‌ಗೆ ಅಮೇರಿಕಾದಲ್ಲಿ ಕರೆಯುವಂತೆ ಕುಕಿಯಾಗಿರಲಿ. ಒಂದು ಕ್ಷಣ ಕಣ್ಣು ಮುಚ್ಚಿ ಹಾಗೂ ಮಹಾನ್ ಗುರುಗಳು ಸ್ವೀಕರಿಸುತ್ತಿದ್ದಾರೆ ಎಂದು ಭಾವಿಸಿ ಅಷ್ಟೆ. ಅದು ಅಮೃತ ಹಾಗೂ ಅಮೃತವು ಎಲ್ಲರಿಗೂ ಸೇರಿದ್ದು. ಅದು ಕ್ರಿಶ್ಚಿಯನ್ನರ ಅಮೃತ, ಹಿಂದೂಗಳ ಅಮೃತ, ಮುಸ್ಲಿಮರ ಅಮೃತ, ಬೌದ್ಧರ ಅಮೃತ ಎಂದಿಲ್ಲ. ಅಮೃತ ಎಂಬುದು ದೇವರದ್ದು.

### ವಿದ್ಯಾರ್ಥಿವೇತನ ತರಬೇತಿ ಕಾರ್ಯಕ್ರಮ – ಭಾರತ.

ಭಾರತದಲ್ಲಿ ಮೊದಲನೆಯ ವಿದ್ಯಾರ್ಥಿವೇತನ ತರಬೇತಿ ಕಾರ್ಯಕ್ರಮವು ಅಭ್ಯಾಸಿಗಳಿಗೆ ಕೊಲ್ಕೊತ್ತಾ ಆಶ್ರಮದಲ್ಲಿ ಸೆಪ್ಟೆಂಬರ್ 26ರಿಂದ ಅಕ್ಟೋಬರ್ 2ರವರೆಗೆ ನಡೆಸಲಾಗುವುದು. ಇದು ನಿವಾಸಿ ಕಾರ್ಯಕ್ರಮವಾಗಿದ್ದು ಇಂಗ್ಲಿಷ್ ಭಾಷೆಯಲ್ಲಿರುತ್ತದೆ.

ಈ ಕಾರ್ಯಕ್ರಮದ ಉದ್ದೇಶವು ಹೊಸ ಅಭಿವೃದ್ಧಿ ಹೊಂದುತ್ತಿರುವ ಕೇಂದ್ರಗಳ ಚಟುವಟಿಕೆಗಳನ್ನು ತರಬೇತುಗೊಳಿಸುವುದು ಹಾಗೂ ಸಂಸ್ಥೆಯ ಕಾರ್ಯ ಚಟುವಟಿಕೆಗಳಲ್ಲಿ ಅವರನ್ನು ಸಾಧನೆ ಮಾಡುವುದರಲ್ಲಷ್ಟೇ ಅಲ್ಲದೆ ಸಂಸ್ಥೆಗೆ ಎಲ್ಲಾ ರೀತಿಯಲ್ಲಿಯೂ ಅವರ ಸಾಮರ್ಥ್ಯಕ್ಕೆ ತಕ್ಕಂತೆ ಇನ್ನೂ ಹೆಚ್ಚು ಹೆಚ್ಚು ಕ್ರಿಯಾಶೀಲರಾಗುವಂತೆ ಉತ್ತೇಜಿಸುವುದಾಗಿದೆ.

ಈ ಕಾರ್ಯಕ್ರಮವನ್ನು ಪ್ರಾರಂಭಿಸಲು ಉ:ಪ್ರ(ಪೂರ್ವ), ಪಶ್ಚಿಮ ಬಂಗಾಳ, ಒರಿಸ್ಸಾ, ಈಶಾನ್ಯ ರಾಜ್ಯಗಳು, ಅಸ್ಸಾಂ, ಬಿಹಾರ ಹಾಗೂ ಜಾರ್ಖಂಡ್, ಉತ್ತರಾಖಂಡ್ ಹಾಗೂ ಛತ್ತೀಸ್‌ಗಢ್ ರಾಜ್ಯಗಳ ವಲಯಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲು ತಮ್ಮ ತಮ್ಮ ವಲಯದ ಅಭ್ಯರ್ಥಿಯನ್ನು ಆಯ್ಕೆ ಮಾಡಿ ಹಾಗೂ ಅವರ ಅರ್ಜಿಗಳನ್ನು ಕಳುಹಿಸುತ್ತಾರೆ. ಈ ಅಭ್ಯರ್ಥಿಗಳಲ್ಲಿ ಮತ್ತೆ 30–35 ಜನರನ್ನು ಮಾತ್ರ ಮೊದಲನೆಯ ಕಾರ್ಯಕ್ರಮಕ್ಕಾಗಿ ಆಯ್ಕೆ ಮಾಡಲಾಗುತ್ತದೆ.

### ಪುನ:ಶ್ಚೇತನ ಕೇಂದ್ರಗಳ ವೇಳಾಪಟ್ಟಿ.

ಅಕ್ಟೋಬರ್ 1, 2009 ಪ್ರಾರಂಭದಿಂದ SMSF ಪುನ:ಶ್ಚೇತನ ಕೇಂದ್ರಗಳ ಬಳಕೆಯಲ್ಲಿ ಬದಲಾವಣೆಯಿರುತ್ತದೆ. ಸಹೋದರ ಮತ್ತು ಸಹೋದರಿ ಅಭ್ಯಾಸಿಗಳನ್ನು ಪ್ರತ್ಯೇಕವಾಗಿ ಪರ್ಯಾಯ ತಿಂಗಳುಗಳಲ್ಲಿ ನಿಗದಿಪಡಿಸಲಾಗುತ್ತದೆ. ಬರುವ ತಿಂಗಳುಗಳು – ಅಕ್ಟೋಬರ್ 2009, ಡಿಸೆಂಬರ್ 2010 ಇವು ಪ್ರತ್ಯೇಕವಾಗಿ ಅಭ್ಯಾಸಿ ಸಹೋದರಿಯರಿಗಾಗಿ ಮಾತ್ರ.

ನವೆಂಬರ್ 2009 ಹಾಗೂ ಜನವರಿ, ಮಾರ್ಚ್, ಮೇ, ಜುಲೈ, ಸೆಪ್ಟೆಂಬರ್ ಹಾಗೂ ನವೆಂಬರ್ 2010 ಈ ತಿಂಗಳುಗಳು ಪ್ರತ್ಯೇಕವಾಗಿ ಅಭ್ಯಾಸಿ ಸಹೋದರರಿಗೆ ಮಾತ್ರ.

ಈಗಾಗಲೇ ಯಾರಿಗೆ ಅನುಮತಿ ಸಿಕ್ಕಿದೆಯೋ ಅವರೆಲ್ಲರೂ ಮೇಲ್ಕಂಡ ಮಾರ್ಗ ಸೂಚನೆಗಳಂತೆ ತಮ್ಮ ತಮ್ಮ ದಿನಾಂಕಗಳನ್ನು ಬದಲಿಸಿಕೊಳ್ಳಬೇಕೆಂದು ಕೇಳಿಕೊಳ್ಳಲಾಗುತ್ತದೆ. ಪ್ರತಿಯೊಬ್ಬರಿಗೂ ಪ್ರತ್ಯೇಕವಾದ ಈ–ಮೇಲ್ ಅನ್ನು ಕಳುಹಿಸಲಾಗುತ್ತದೆ. ಇದರ ಕುರಿತಾಗಿ ಪ್ರಶ್ನೆಗಳನ್ನು retreat@sahajmarg.org ಗೆ ಕಳುಹಿಸಬಹುದು. ಈ ಕೇಂದ್ರಗಳಲ್ಲಿ ಮಕ್ಕಳಿಗೆ ಯಾವುದೇ ಸಂದರ್ಭದಲ್ಲಿ ಅನುಮತಿಯಿರುವುದಿಲ್ಲ ಎಂಬುದನ್ನು ಗಮನಿಸತಕ್ಕದ್ದು.

## ಕ್ರೆಸ್ಟ್– ಬೆಂಗಳೂರಿನ 3ನೇ ವರ್ಷದ ವಾರ್ಷಿಕೋತ್ಸವ.



ಆಗಸ್ಟ್ 9ರಂದು ಬೆಂಗಳೂರಿನ ಕ್ರೆಸ್ಟ್ ತನ್ನ ಮೂರನೆಯ ವಾರ್ಷಿಕೋತ್ಸವವನ್ನು ಸ್ವಯಂಸೇವಕರ, ಪ್ರವರ್ತಕರ ಹಾಗೂ ಬೆಂಗಳೂರಿನ ಬೋಧಕ ವರ್ಗದವೆಲ್ಲರ ಸಮ್ಮಿಲನದೊಂದಿಗೆ ಕಂಡುಕೊಂಡಿತು. 9ನೇ ಆಗಸ್ಟ್, 2006 ರಂದು ಗುರುಗಳು ಬೆಂಗಳೂರಿನ ಕ್ರೆಸ್ಟ್ ಅನ್ನು ಮೊದಲನೆಯ ಎರಡು ವಾರದ ಸಂಶೋಧನಾ ಸಭೆಯೊಂದಿಗೆ ಉದ್ಘಾಟಿಸಿದರು.

ಈ ಸಮ್ಮಿಲನವು ಬೆಳಗಿನ ಸತ್ಸಂಗದೊಂದಿಗೆ ಪ್ರಾರಂಭವಾಗಿ ಮಧ್ಯಾಹ್ನದ ಭೋಜನದೊಂದಿಗೆ ಮುಕ್ತಾಯವಾಯಿತು. ಅದು 110 ಅಭ್ಯಾಸಿಗಳ ಸಮ್ಮಿಲನವಾಗಿತ್ತು. ಕ್ರೆಸ್ಟ್‌ನ ನಿರ್ದೇಶಕರಾದ ಸಹೋದರ ಆರ್.ಜಗನ್ನಾಥನ್‌ರವರು ಕ್ರೆಸ್ಟ್ ನಲ್ಲಿ ಜರುಗುವ ಎಲ್ಲಾ ಕಾರ್ಯಚಟುವಟಿಕೆಗಳ ಬಗ್ಗೆ ಸಂಪೂರ್ಣ ವಿವರ ನೀಡಿದರು.

"ಸಂಸ್ಥೆಯಲ್ಲಿನ ಸೇವೆ ಹಾಗೂ ಅದರ ವಿವಿಧ ಮುಖಗಳು" ಈ ವಿಷಯದ ಬಗ್ಗೆ ಗುಂಪು ಚರ್ಚೆಯನ್ನು ಏರ್ಪಡಿಸಲಾಗಿತ್ತು. ಸಹೋದರರಾದ ಭಾಸ್ಕರ್‌ರಾವ್, ಕೆ.ಟಿ. ಮಂಜುನಾಥ್. ಬಿ.ಜಿ.ಸುಬ್ರಹ್ಮಣ್ಯರವರು ಪರಿಣಿತರ ತಂಡದಲ್ಲಿದ್ದರು. ಸಹೋದರ ಬಿ.ಶ್ರೀನಿವಾಸರವರು ನಿಯಂತ್ರಕರಾಗಿದ್ದರು. ವಿಷಯವನ್ನು ಕುರಿತಾಗಿ ಅನೇಕ ಅಂಶಗಳನ್ನು ಹೊರತರಲಾಯಿತು ಹಾಗೂ ಪರಿಣಿತರ ತಂಡದವರು ಈ ವಿಷಯದ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ನೆರೆದಿದ್ದ ಸಭಿಕರು ಅನೇಕ ಪ್ರಶ್ನೆಗಳನ್ನು ಹಾಕಿ ಸ್ಪಷ್ಟೀಕರಣವನ್ನು ಬಯಸಿದರು. ಈ ಚರ್ಚೆಯಲ್ಲಿ ನಿರಂತರ ಸಾಧನೆ ಹಾಗೂ ಸೇವೆ ಮಾಡುವಾಗ ಗುರುಗಳಿಗೆ ಸಂಪೂರ್ಣ ಶರಣಾಗತಿಯ ಪ್ರಾಮುಖ್ಯತೆಯನ್ನು ಎತ್ತಿತೋರಿಸಲಾಯಿತು. ಇದರ ನಂತರ ಒಂದು ಭಕ್ತಿಗೀತೆ, ಕೊಳಲುವಾದನ ಹಾಗೂ "ನಿಜವಾದ ಮೌಲ್ಯ" ಶೀರ್ಷಿಕೆಯ ಒಂದು ದೃಶ್ಯನಾಟಕ ಇವುಗಳನ್ನೊಳಗೊಂಡ ಸಾಂಸ್ಕೃತಿಕ ಕಾರ್ಯಕ್ರಮವಿತ್ತು.

ಸಹಾಯಕ ನಿರ್ದೇಶಕರಾದ ಸಹೋದರ ಪ್ರಮೋದ್ ಜೋಹರಿ ಅವರು ವಂದನಾರ್ಪಣೆ ಮಾಡಿದರು. ಎಲ್ಲರೂ ಭಕ್ತಿ ಮತ್ತು ಪ್ರೇಮದಿಂದ ಗುರುಗಳ ಸೇವೆ ಮುಂದುವರೆಸಲು ಪುನರುತ್ಸಾಹಗೊಂಡರು.

## ಧ್ಯಾನಮಂದಿರದ ಉದ್ಘಾಟನೆ, ರಾಮ್‌ಗಢ–ಜಾರ್ಖಂಡ್

8ನೇ ಆಗಸ್ಟ್, ಶನಿವಾರದಂದು ರಾಮ್‌ಗಢ ಕೇಂದ್ರದ ಅಭ್ಯಾಸಿಗಳಿಗೆ ಬಹಳ ಸಂತೋಷದ ಸಂದರ್ಭವಾಗಿತ್ತು. ಗುರುಗಳ ಕೃಪೆಯಿಂದ, 1970ರಿಂದ ಸಹಜಮಾರ್ಗ ಸಾಧನೆ ಮಾಡುತ್ತಿರುವ ಶ್ರೀ ರಾಜ್‌ನಾಥ್ ತಿವಾರಿ ಅವರು, ವಲಯಾಧಿಕಾರಿ ಶ್ರೀ ಜಿ.ಎಸ್.ಭಟ್ನಾಗರ್ ಹಾಗೂ ವಿವಿಧ ಕೇಂದ್ರಗಳ ಅಭ್ಯಾಸಿಗಳ ಉಪಸ್ಥಿತಿಯಲ್ಲಿ ಉದ್ಘಾಟಿಸಿದರು. ನಂತರ ಸತ್ಸಂಗವು ಜರುಗಿತು.

ಉಪಾಹಾರದ ನಂತರ ಪ್ರಾರಂಭವಾದ "ಪ್ರಾರಂಭಿಕ ಅಭ್ಯಾಸಿ ತರಬೇತಿ ಕಾರ್ಯಕ್ರಮ"ದಲ್ಲಿ ನಾಲ್ಕು ಪ್ರಮುಖ ಅಂಶಗಳಾದ ಧ್ಯಾನ, ಶುದ್ಧೀಕರಣ, ಪ್ರಾರ್ಥನೆ ಹಾಗೂ ನಿರಂತರ ಸ್ಮರಣೆ ಇವುಗಳ ಬಗ್ಗೆ ಚರ್ಚಿಸಲಾಯಿತು. ಈ ಚಟುವಟಿಕೆಯ ನಿರ್ವಾಹಕರಾಗಿದ್ದವರು ಸಹೋದರ. ಪರಮಾನಂದ್ ಪಾಂಡೆ ಹಾಗೂ ಸಹೋದರಿ ಅಲ್ಪನಾ ತಿವಾರಿ. ಎರಡನೇ ಸೆಷನ್‌ನಲ್ಲಿ ರಾಂಚಿಯ ಸಹೋದರಿ ಅನಿತಾ ತಿವಾರಿ ಅವರು ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ನಂತರ "ವಾಟ್ ಈಜ್ ಮಾಸ್ಟರ್"–ಈ ಸಿಡಿಯ ದೃಶ್ಯಾವಳಿಯನ್ನು ತೋರಿಸಲಾಯಿತು.

ಈ ಕಾರ್ಯಕ್ರಮದ ಜೊತೆಯಲ್ಲಿಯೇ ವಲಯ ಸಂಖ್ಯೆ 17ರ ಪ್ರಶಿಕ್ಷಕರ ತುರ್ತುಸಭೆಯ ಇನ್ನೊಂದು ಕೊಠಡಿಯಲ್ಲಿ ನಡೆಯಿತು. ತಿರುಪ್ಪೂರ್‌ನಲ್ಲಿ ನಡೆದ ಪ್ರಶಿಕ್ಷಕರ ಸಭೆಯ ದೃಷ್ಟಿಯಿಂದ ಪ್ರಶಿಕ್ಷಕರ ಚಾರಿತ್ರ್ಯ ನಿರ್ವಹಣೆ, ಮಾಸಿಕ ಹಾಗೂ ವಲಯದ ವಿವರದ ಕ್ಯಾಲೆಂಡರ್, ಕೇಂದ್ರದ ಅಭಿವೃದ್ಧಿಗಾಗಿ ಕಾರ್ಯಚಟುವಟಿಕೆಗಳು,

SMRTI ನ ಕಾರ್ಯಕ್ರಮಗಳು, ಬೋಧಕರ ಸಿದ್ಧತೆ; ವಿ.ಬಿ.ಎಸ್.ಇ ಹಾಗೂ ಎಖೋಸ್ ಇಂಡಿಯ ವಾರ್ತಾ ಪತ್ರಿಕೆ ಇವುಗಳು ಚರ್ಚೆಯ ಮುಖ್ಯ ವಿಷಯಗಳಾಗಿದ್ದವು.

ಎರಡನೇ ದಿನದ ಕಾರ್ಯಕ್ರಮವು ಬೆಳಗಿನ ಸತ್ಸಂಗದೊಂದಿಗೆ ಪ್ರಾರಂಭವಾಯಿತು. ಸತ್ಸಂಗದ ನಂತರ ಆಯೋಜಿಸಲಾಗಿದ್ದ ಮುಕ್ತಸಭೆಗೆ ಸುಮಾರು 30 ಜನರು ಹಾಜರಿದ್ದರು. 15 ಹೊಸ ಅಭ್ಯಾಸಿಗಳು ಪ್ರಾರಂಭಿಸಿದರು ಹಾಗೂ ಐವರು ಪ್ರಾರಂಭ ಮಾಡುವ ನಿರೀಕ್ಷೆ ಇದೆ. ಈ ಎರಡು ದಿನದ ಕಾರ್ಯಕ್ರಮದಲ್ಲಿ ಸುಮಾರು ಎರಡು ನೂರು ಅಭ್ಯಾಸಿಗಳು ಪಾಲ್ಗೊಂಡಿದ್ದರು.

## ಗೋದಾವರಿಖಣಿ (ಆಂಧ್ರಪ್ರದೇಶ) – ಭಂಡಾರದಿಂದ ಕಲಿತ ಪಾಠಗಳು

ಗೋದಾವರಿಖಣಿ ಕೇಂದ್ರದಲ್ಲಿ 9ನೇ ಆಗಸ್ಟ್ 2009ರಂದು ಪೂರ್ಣದಿನದ ಕಾರ್ಯಕ್ರಮವನ್ನು ನಡೆಸಲಾಯಿತು. ಸುಮಾರು 125 ಅಭ್ಯಾಸಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಉದ್ದೇಶವು ತಿರುಪ್ಪೂರ್‌ನಲ್ಲಿ ನಡೆದ ಗುರುಗಳ ಜನ್ಮದಿನದ ಆಚರಣೆಯ ಸಂದರ್ಭದ ಅನುಭವಗಳನ್ನು ಹಾಗೂ ಅಲ್ಲಿ ಕಲಿತ ಪಾಠಗಳನ್ನು ಹಂಚಿಕೊಳ್ಳುವುದಾಗಿತ್ತು.

ಈ ಕೆಳಕಂಡ ಅಂಶಗಳು ಎಲ್ಲರೂ ಸಾಮಾನ್ಯವಾಗಿ ವ್ಯಕ್ತಪಡಿಸಿದ ಅನುಭವಗಳು ಹಾಗು ಕಲಿತ ಪಾಠಗಳಾಗಿತ್ತು.

* ಭಂಡಾರದ ಸಮಯದಲ್ಲಿ ಅವರನ್ನು ನಾವು ವೈಯಕ್ತಿಕವಾಗಿ ಭೇಟಿ ಮಾಡಿದ್ದೇವೋ, ಇಲ್ಲವೋ ಆದರೆ ಹೆಚ್ಚಿನ ವೇಳೆಯಲ್ಲಿ ಗುರುಗಳ ಸನಿಹತೆಯನ್ನು ಅನುಭವಿಸಲಾಯಿತು.

* ಉತ್ಸವದಿಂದ ಹಿಂದಿರುಗಿ ಬಂದ ನಂತರ ಹೃದಯದಲ್ಲಿ ಆಳವಾದ ಹಂಬಲ ಹಾಗೂ ಪ್ರಾಪಂಚಿಕ ವಸ್ತುಗಳೊಂದಿಗಿನ ಬಂಧನವು ಕಡಿಮೆಯಾದ ಅನುಭವವಾಗಿದೆ.

* ಭಂಡಾರದ ನಂತರದ ವೈಯಕ್ತಿಕ ಹಾಗೂ ಸಾಮೂಹಿಕ ಧ್ಯಾನಗಳಲ್ಲಿ ಆಳವಾದ ಶಾಂತತೆಯ ಅನುಭವವಾಗಿದೆ.

* ಹೆಚ್ಚು ಕೆಲಸವನ್ನು ಕಡಿಮೆ ಸ್ವಯಂಸೇವಕರು ನಿರ್ವಹಿಸಿದ ರೀತಿಯು, ತಂಡವಾಗಿ ಮಾಡುವ ಕೆಲಸದ ಪರಿಣಾಮಕಾರಿತ್ವವು ಎಲ್ಲರ ಪ್ರಶಂಸೆಗೆ ಪಾತ್ರವಾಯಿತು. ಅದೇ ರೀತಿಯಲ್ಲಿ ತಂಡವಾಗಿ ಕೆಲಸ ಮಾಡುವ ಸ್ಫೂರ್ತಿಯು ಸ್ಥಳೀಯ ಕೇಂದ್ರಗಳಲ್ಲಿಯೂ ಪ್ರತಿಫಲಿಸಬೇಕು.

* ಬೇರೆ ಕೇಂದ್ರದ ಅಭ್ಯಾಸಿಗಳು ಹಾಗೂ ಸ್ಥಳೀಯ ಅಭ್ಯಾಸಿಗಳೆಂಬ ಭೇದಮಾಡದೆ ವರ್ತಿಸಿದ್ದು ಎಲ್ಲರೂ ನಿಜವಾದ ಭ್ರಾತೃತ್ವದ ಭಾವನೆಯನ್ನು ಬೆಳೆಸಿಕೊಳ್ಳುವ ಅವಶ್ಯಕತೆಯನ್ನು ವ್ಯಕ್ತಪಡಿಸಿದ ರೀತಿ ತಿರುಪ್ಪೂರ್‌ನಲ್ಲಿ ಪಾರದರ್ಶಕವಾಗಿತ್ತು.


ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ
ವಲಯ ಸುತ್ತುವರಿ

ಸೆಪ್ಟೆಂಬರ್ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 5

## ಅಖಿಲ ಭಾರತ ಪ್ರಬಂಧ ಕಾರ್ಯಕ್ರಮ

ಭವಿಷ್ಯದ ರೂವಾರಿಗಳಾದ ಇಂದಿನ ಮಕ್ಕಳು ಮತ್ತು ಯುವಜನರಿಗೆ ಗುರುಗಳು ಬಹಳ ಪ್ರಾಮುಖ್ಯತೆಯನ್ನು ನೀಡುತ್ತಾರೆ. ಸಂಯುಕ್ತ ರಾಷ್ಟ್ರದ ಅಂತರರಾಷ್ಟ್ರೀಯ ಯುವದಿನದಂದು ಪ್ರಬಂಧ ಸ್ಪರ್ಧೆಯನ್ನು ಶ್ರೀರಾಮಚಂದ್ರ ಮಿಷನ್ನಿನ ಎಲ್ಲಾ ಕೇಂದ್ರಗಳಲ್ಲಿ ಮತ್ತು ಅನೇಕ ಶಿಕ್ಷಣ ಕೇಂದ್ರಗಳಲ್ಲಿ 12 ಆಗಸ್ಟ್ 2009 ರಂದು ನಡೆಸಲಾಯಿತು. ಇದನ್ನು ಸಂಯುಕ್ತ ರಾಷ್ಟ್ರಗಳ ಮಾಹಿತಿ ಕೇಂದ್ರದ (ಭಾರತ ಮತ್ತು ಭೂತಾನ್) ಸಹಯೋಗದೊಂದಿಗೆ ಶ್ರೀ ರಾಮಚಂದ್ರ ಮಿಷನ್ ಆಯೋಜಿಸಿತ್ತು. ಮಕ್ಕಳು ಮತ್ತು ಯುವಜನರಲ್ಲಿ ಪ್ರೇಮ ಮತ್ತು ಸಹನೆಯಂತಹ ಮೌಲ್ಯಗಳ ಕುರಿತು ಚಿಂತನೆಯನ್ನು ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿತ್ತು. ಮಾನವತೆಯ ಐಕ್ಯತೆಯ ಗುರಿ ಸಾಧಿಸಲು ಮತ್ತು ಭಾಷೆಗಳ ತಡೆಗಳನ್ನು ಮೀರಲು ಈ ಪ್ರಬಂಧ ಕಾರ್ಯಕ್ರಮವನ್ನು 13 ಸ್ಥಳೀಯ ಭಾಷೆಗಳಲ್ಲಿ ಆಯೋಜಿಸಲಾಗಿತ್ತು. ದೇಶದಾದ್ಯಂತ ಶಾಲಾ ಕಾಲೇಜುಗಳಲ್ಲಿ ಇದನ್ನು ಅತ್ಯುತ್ಸಾಹದಿಂದ ಸ್ವೀಕರಿಸಲಾಯಿತು.

ಕೇರಳದ ಅಲುವಾದಲ್ಲಿ ಕೇರಳ ವಲಯದ ಅನೇಕ ಕೇಂದ್ರಗಳಿಂದ ಬಂದ 140 ಸ್ವಯಂಸೇವಕರಿಗೆ ತರಬೇತಿಯನ್ನು ನೀಡಲಾಯಿತು. ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧೆಡೆಗಳ ಶಾಲಾ ಕಾಲೇಜುಗಳಿಂದ ಬಂದ ಸುಮಾರು 1000 ಜನ ಭಾಗವಹಿಸಿದ್ದರು. ಪ್ರಮುಖ ಸ್ಥಳಗಳಲ್ಲಿ ಕಾರ್ಯಕ್ರಮದ ಭಿತ್ತಿಪತ್ರಗಳನ್ನು ಹಾಕಲಾಗಿತ್ತು ಮತ್ತು ಸರಳವಾದರೂ ಯೋಚನೆಗೀಡುಮಾಡುವಂತಹ ವಿಷಯಗಳು ವಿದ್ಯಾರ್ಥಿಗಳು,ಪಾಲಕರು ಮತ್ತು ಶಿಕ್ಷಕರಲ್ಲಿ ಆಸಕ್ತಿಯನ್ನು ಹುಟ್ಟು ಹಾಕಿತು ಹಾಗೂ ಅನೇಕರು ಮಿಷನ್ನಿನ ಬಗ್ಗೆ ಹೆಚ್ಚು ತಿಳಿದುಕೊಳ್ಳಬಯಸಿದರು. ಕೆಲವು ಶಾಲೆಗಳು ಮಕ್ಕಳಲ್ಲಿ ಮೌಲ್ಯವನ್ನು ಅಳವಡಿಸಿಕೊಳ್ಳುವಂತೆ ಮನವರಿಕೆ ಮಾಡಿಕೊಡುವಂತೆ ಬಿನ್ನವಿಸಿದವು. ಸ್ವಯಂಸೇವಕರು ಈಗ ಬರಹಗಳನ್ನು ಸಂಗ್ರಹಿಸುತ್ತಿದ್ದಾರೆ ಮತ್ತು ಪ್ರಾದೇಶಿಕ ಹಂತದ ಮೌಲ್ಯಮಾಪನವು ಅಲುವಾದ ವಲಯಾಶ್ರಮದಲ್ಲಿ ನಡೆಯುವುದು. ಆಯ್ದ ಪ್ರಬಂಧಗಳನ್ನು ರಾಷ್ಟ್ರಮಟ್ಟದ ಮೌಲ್ಯಮಾಪನಕ್ಕೆ ಕಳುಹಿಸಲಾಗುವುದು.





**ಅಹಮದಾಬಾದ್**ನಲ್ಲಿ 203 ಶೈಕ್ಷಣಿಕ ಸಂಸ್ಥೆಗಳು ಪಾಲ್ಗೊಂಡಿದ್ದವು. ಗುಜರಾತಿ, ಹಿಂದಿ ಮತ್ತು ಆಂಗ್ಲ ಭಾಷೆಗಳಲ್ಲಿ ಸುಮಾರು 9700 ಪ್ರಬಂಧಗಳನ್ನು ನಿರೀಕ್ಷಿಸಲಾಗುತ್ತಿದೆ. ಕೇಂದ್ರವನ್ನು 6 ಭೌಗೋಳಿಕ ಪ್ರದೇಶಗಳನ್ನಾಗಿ ಮಾಡಲಾಗಿದ್ದು ಸ್ವಯಂಸೇವೆ ತಂಡಗಳು ವಹಿಸಿದ ಕಾರ್ಯವನ್ನು ನಿರ್ವಹಿಸುತ್ತಿವೆ. ಮೊದಲನೇಬಾರಿಗೆ ಅಹಮದಾಬಾದ್ ಕೇಂದ್ರವು ಮೊದಲನೇ ಹೆಜ್ಜೆ ಇಟ್ಟಿದೆ ಹಾಗೂ ಪ್ರಮುಖ ಕೇಂದ್ರಗಳಿಂದ ದೊರಕಿದ ಪ್ರತಿಕ್ರಿಯೆಯು ಆಶಾದಾಯಕವಾಗಿದೆ.

**ಬರೋಡಾ** ಕೇಂದ್ರದಲ್ಲಿ ಸುಮಾರು 56 ಸಂಸ್ಥೆಗಳು ಭಾಗವಹಿಸಿದ್ದು ಸರಿಸುಮಾರು 5700 ಆಸಕ್ತ ವಿದ್ಯಾರ್ಥಿಗಳು ಉತ್ಸಾಹ ಮತ್ತು ಆಸ್ಥೆಯಿಂದ ಪಾಲ್ಗೊಂಡರು. ಈ ಬೃಹತ್ ಕಾರ್ಯಕ್ರಮದ ಯೋಜನೆಯನ್ನು 20 ಸ್ವಯಂಸೇವಕರ ತಂಡವು ಮುಂಚೆಯೇ ತಯಾರಿ ಮಾಡಿಕೊಂಡಿತ್ತು. ಪ್ರಬಂಧ ಸ್ಪರ್ಧೆಯು ಆಂಗ್ಲ, ಹಿಂದಿ ಮತ್ತು ಗುಜರಾತಿ ಭಾಷೆಗಳಲ್ಲಿ ನಡೆಸಲಾಗಿದ್ದು ಮೌಲ್ಯಮಾಪನವು ಭರದಿಂದ ಸಾಗಿದೆ.

ದಕ್ಷಿಣ **ಕರ್ನಾಟಕ**ದಲ್ಲಿ ಸುಮಾರು 50–60 ಸ್ವಯಂಸೇವಕರು ರಾಜ್ಯದ ಅನೇಕ ಶಾಲಾಕಾಲೇಜುಗಳನ್ನು ಸಂಪರ್ಕಿಸಿ ಅವರ ವಿದ್ಯಾರ್ಥಿಗಳನ್ನು ಈ ಕಾರ್ಯಕ್ರಮವನ್ನು ನಡೆಸಲು ಮತ್ತು ಇದರಲ್ಲಿ ಭಾಗವಹಿಸಲು ಪ್ರೋತ್ಸಾಹ ನೀಡುವಂತೆ ವಿನಂತಿಸಿದರು. ಶೈಕ್ಷಣಿಕ ಸಂಸ್ಥೆಗಳಿಂದ ಪ್ರೋತ್ಸಾಹಕರ ಪ್ರತಿಕ್ರಿಯೆ ದೊರಕಿತು ( ಅದರಲ್ಲೂ ವಿಶೇಷವಾಗಿ ಶಾಲೆಗಳು ತಮ್ಮ ಮಕ್ಕಳಲ್ಲಿ ಮೌಲ್ಯವನ್ನು ಬಿತ್ತಲು ಅನುಕೂಲಕರ ಅವಕಾಶ ದೊರಕಿದುದಕ್ಕೆ ಸಂತೋಷದಿಂದ ಪಾಲ್ಗೊಂಡರು.) ದಕ್ಷಿಣ ಕರ್ನಾಟಕದಿಂದ ಸುಮಾರು 600 ಶಾಲಾಕಾಲೇಜುಗಳು ಭಾಗವಹಿಸುತ್ತಿವೆ. ಸದ್ಯದಲ್ಲೇ ಮೌಲ್ಯಮಾಪನವು ಆರಂಭವಾಗಲಿದ್ದು ಶಾಲೆ, ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ಅತ್ಯುತ್ತಮ ಪ್ರಬಂಧಗಳ ಆಯ್ಕೆ ನಡೆಯಲಿದೆ.

### ಕೇಂದ್ರದ ಪ್ರಗತಿ ಚಿತ್ತನೂರು, ಆಂಧ್ರಪ್ರದೇಶ

ಆಂಧ್ರಪ್ರದೇಶದ ಮಹಬೂಬ್‌ನಗರ ಜಿಲ್ಲೆಯ ಚಿತ್ತನೂರು ಒಂದು ಚಿಕ್ಕ ಹಳ್ಳಿ. ಈ ಕೇಂದ್ರವು 1991ರಲ್ಲಿ ಎರಡು ಅಭ್ಯಾಸಿಗಳಿಂದ ಪ್ರಾರಂಭವಾಗಿದ್ದು ಈಗ ಹೆಚ್ಚಾಗಿ ದಿನಗೂಲಿ ನೌಕರರನ್ನು ಸೇರಿದಂತೆ 35ಕ್ಕೂ ಅಧಿಕ ಸಂಖ್ಯೆಯಲ್ಲಿದ್ದಾರೆ. ಅಭ್ಯಾಸಿಗಳ ಸಂಖ್ಯಾವೃದ್ಧಿಯಾದಂತೆ ಈಗ ಅವರು ಸೇರುತ್ತಿದ್ದ ಅಭ್ಯಾಸಿಯ ಮನೆಯು



ಸಾಲದಾಗಿತ್ತು. ಈ ಅಗತ್ಯವನ್ನು ಪೂರೈಸಲು ಇಬ್ಬರು ಅಭ್ಯಾಸಿಗಳು ಸರಕಾರದಿಂದ ಕೊಂಚ ಜಾಗವನ್ನು ಖರೀದಿಸಿ ಮಿಷನ್ನಿನ ಚಟುವಟಿಕೆಗಳನ್ನು ನಿರ್ವಹಿಸಲು ಕೋಣೆಯೊಂದನ್ನು (18 ಅಡಿ X 30ಅಡಿ) ನಿರ್ಮಿಸಲು ಗುರುಗಳ ಅನುಮತಿಯನ್ನು ಪಡೆದರು. ಒಂದು ವರ್ಷದ ಅನಂತರ ಕೋಣೆಯು ತಯಾರಾಯಿತು ಮತ್ತು ಗುರುಗಳು ಮೊದಲ ಸತ್ಸಂಗವನ್ನು ಆಗಸ್ಟ್ 16,2009ರಂದು ನಡೆಸಲು ಅನುಮತಿ ನೀಡಿದ್ದರು. ಜಿಲ್ಲೆಯಲ್ಲಿ ಮಿಷನ್ನಿನ ಚಟುವಟಿಕೆಗಳಿಗಾಗಿ ಪ್ರತ್ಯೇಕ ಸ್ಥಳ ನಿರ್ಮಾಣಗೊಂಡಿರುವುದು ಇದೇ ಮೊದಲ ಬಾರಿಯಾದ್ದರಿಂದ ಮಹಬೂಬ್‌ನಗರ ಜಿಲ್ಲೆಯ ಅಭ್ಯಾಸಿಗಳಿಗೆಲ್ಲ ಇದೊಂದು ಸುದಿನ. ಜಿಲ್ಲೆಯ ವಿವಿಧೆಡೆಗಳಿಂದ ಬಂದ ಸುಮಾರು 75ಕ್ಕೂ ಮೇಲ್ಪಟ್ಟ ಅಭ್ಯಾಸಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪೂರ್ಣ ದಿನವನ್ನು ಸಹಜಮಾರ್ಗವನ್ನು ಆಳವಾಗಿ ತಿಳಿದುಕೊಳ್ಳಲು ಬಳಸಿಕೊಂಡರು. ಅಭ್ಯಾಸಿಗಳ ಪ್ರಾಮಾಣಿಕ ಪ್ರಯತ್ನ, ಪ್ರೇಮ ಮತ್ತು ಶ್ರದ್ಧೆಗಳಿದ್ದರೆ ಕನಿಷ್ಠ ಆರ್ಥಿಕ ಸಂಪನ್ಮೂಲಗಳೊಂದಿಗೆ ಇಂತಹ ಜಾಗದ ನಿರ್ಮಾಣ ಸಾಧ್ಯವೆನ್ನಲು ಚಿತ್ತನೂರಿನ ಧ್ಯಾನಮಂದಿರವು ಒಳ್ಳೆಯ ಉದಾಹರಣೆಯೆಂಬುದು ಅಭ್ಯಾಸಿಯೊಬ್ಬರ ಅಭಿಪ್ರಾಯವಾಗಿತ್ತು.

## ಮಂಗಳೂರಿನಲ್ಲಿ ಕಮ್ಮಟ



ಮಂಗಳೂರು ಕೇಂದ್ರದಲ್ಲಿ ಸುಮಾರು 35 ಭಾಗಿಗಳೊಂದಿಗೆ ಆಗಸ್ಟ್9, 2009ರಂದು ಸೋದರ ಮೋಹನದಾಸ್‌ರವರು ಕಮ್ಮಟವೊಂದನ್ನು ಆಯೋಜಿಸಿದ್ದರು.

ಸತ್ಸಂಗದ ನಂತರ ಗುರುಗಳ ಡಿವಿಡಿ 'ಕರ್ತವ್ಯ ಮತ್ತು ಜವಾಬ್ದಾರಿ'ಯನ್ನು ಪ್ರದರ್ಶಿಸಲಾಯಿತು. ಆನಂತರ ಭಂಡಾರದಲ್ಲಿ ಪಾಲ್ಗೊಳ್ಳುವ ಮಹತ್ವ ಮತ್ತು ಮರಳಿ ಬಂದ ನಂತರ ಅದನ್ನು ನೆನೆಯುವುದರಿಂದ ಆ ಸ್ಥಿತಿಯನ್ನು ಕಾಪಾಡಿಕೊಳ್ಳುವ ಬಗ್ಗೆ ಚರ್ಚಿಸಲಾಯಿತು.

ಚಾರಿತ್ರ್ಯ ನಿರ್ಮಾಣದ ಮಹತ್ವದ ಬಗ್ಗೆ ಮಾತನಾಡುತ್ತಾ ಅವರು ನಿಯಮವಾದ 'ಬೇರೆಯವರಲ್ಲಿ ಪ್ರೇಮ ಮತ್ತು ಶ್ರದ್ಧೆ ಮೂಡುವಂತೆ ನಮ್ಮ ಬದುಕನ್ನು ರೂಪಿಸಿಕೊಳ್ಳಬೇಕು' ಎಂಬುದನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ಗುರಿಯನ್ನು ಸಾಧಿಸುವಂತೆ ನಮ್ಮ ನಡತೆಯಲ್ಲಿ ಬದಲಾವಣೆ ತರಲು ನಾವು ದೃಢಸಂಕಲ್ಪ ಮಾಡಬೇಕು.

ಚರ್ಚಿತಗೊಂಡ ಇನ್ನಿತರ ವಿಷಯಗಳಲ್ಲಿ ಮಾನವ ಪ್ರಗತಿಯಲ್ಲಿ ಗುರುಗಳ ಪಾತ್ರ ಮತ್ತು ನಿಯಮಿತ ಸಾಧನೆ ಮುಂತಾದವಿದ್ದವು. ಮಲಗುವ ಮುನ್ನಿನ ಪ್ರಾರ್ಥನೆಯನ್ನು ಮಾಡುವ ಸರಿಯಾದ ವಿಧಾನವನ್ನು ತಿಳಿಸಲಾಯಿತು. ಹೊಸ ವಿಚಾರಗಳನ್ನು ತಿಳಿಯಲು ಕೇಂದ್ರದ ಪ್ರಗತಿಯ ಸಲುವಾಗಿ ಏನು ಮಾಡಬಹುದೆನ್ನುವುದರ ಬಗ್ಗೆ ಚರ್ಚಾಕೂಟ ನಡೆಸಲಾಯಿತು.

## ಭೋಪಾಲ್– ಮಧ್ಯಪ್ರದೇಶದ ಪ್ರಶಿಕ್ಷಕರ ಸಮಾಲೋಚನೆ

ಒಂಬತ್ತು ವರ್ಷಗಳ ನಂತರ ಆಗಸ್ಟ್ 15,2009ರಂದು ಭೋಪಾಲ್‌ನಲ್ಲಿ ಸಮಾಲೋಚನೆಯನ್ನು ನಡೆಸಲಾಯಿತು. ಪ್ರಶಿಕ್ಷಕರ ಕಾರ್ಯಗಳ ಬಗ್ಗೆ ಅನೇಕ ಮುಖ್ಯ ವಿಷಯಗಳನ್ನು ಎತ್ತಲಾಯಿತು ಮತ್ತು ಮುಂಬರುವ ತಿಂಗಳುಗಳ ಕಾರ್ಯವಿಧಾನಗಳನ್ನು ಸೂಚಿಸಲಾಯಿತು.

- ❖ಪ್ರಶಿಕ್ಷಕರ ವೈಯಕ್ತಿಕ ಸಾಧನೆ ಮತ್ತು ಅವರ ಅನುಭವಗಳಿಗೆ ಪ್ರಾಮುಖ್ಯತೆ ನೀಡಲಾಯಿತು.
- ❖ಮಿಷನ್ನಿನ ಅಂತರಿಕ ಸಂವಹನವನ್ನು ಸುಲಭಗೊಳಿಸಲು ಈಮೇಲ್ ಬಳಕೆಯ ಅಗತ್ಯಕ್ಕೆ ಒತ್ತುನೀಡಲಾಯಿತು.
- ❖ವಲಯದಲ್ಲಿ SMRTI ನ ಚಟುವಟಿಕೆಗಳು ಮತ್ತು ವಲಯದ ಚಟುವಟಿಕೆಗಳ ದಿನಸೂಚಿಯನ್ನು ಪರಿಶೀಲಿಸಲಾಯಿತು.
- ❖ಮುಖ್ಯ ಕಚೇರಿಯಿಂದ ಹೊರಡಿಸಿದ ಸುರಕ್ಷಾ ವಿಧಾನಗಳು 2008 ನ್ನು ಜಾರಿಗೊಳಿಸುವ ಬಗೆಯನ್ನು PPT ರೂಪದಲ್ಲಿ ಭಾಗಿಗಳಿಗೆ ತಿಳಿಸಲಾಯಿತು.
- ❖ವಲಯಾಧಿಕಾರಿಗಳಾದ ಸೋದರ ವಿಕಲ್ಪ್‌ರವರು ಚಟುವಟಿಕೆಗಳನ್ನು ನಿರ್ವಹಿಸುವುದರಲ್ಲಿ ಕೇಂದ್ರದ ಮುಖ್ಯಸ್ಥರ ಪಾತ್ರ, ಆಶ್ರಮದ ಅನೇಕ ನಿರ್ಮಾಣಗಳ ಸಮಾಪ್ತಿ, ಕಾರ್ಪಸ್ ಸದಸ್ಯತ್ವ, ಮುಕ್ತ ಸಭೆಗಳು, ತರಬೇತಿ ಕಾರ್ಯಕ್ರಮಗಳು, ಉಪಕೇಂದ್ರಗಳಿಗೆ ಪ್ರಶಿಕ್ಷಕರ ಭೇಟಿ, ಪ್ರಶಿಕ್ಷಕರ ಮಾಸಿಕ ಕೂಟ ಇತ್ಯಾದಿಗಳನ್ನು ಚರ್ಚಿಸಿದರು.
- ❖ಸೋದರ ಸಚಿನ್ ಸಿನ್ಹಾರವರ ಪ್ರಸ್ತುತಿ 'ವಲಯದ ಮುನ್ನೋಟ' ವು ಭವಿಷ್ಯದ ಚಿತ್ರಣಕ್ಕೆ ಸಹಕಾರಿಯಾಯಿತು.

## ಇಂದೋರ್

ಭಾನುವಾರ, ಜುಲೈ 5 ರಂದು ಇಂದೋರ್‌ನಲ್ಲಿ 'ಮಾನವ ಪರಿವರ್ತನೆ' ಎಂಬ ವಿಷಯದ ಬಗ್ಗೆ ವಿಶೇಷ ಕಾರ್ಯಕ್ರಮವನ್ನು ನಡೆಸಲಾಯಿತು. ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ವಿವಿಧ ವಿಷಯಗಳ ಬಗ್ಗೆ ಅನೇಕರು ಉಪನ್ಯಾಸ ನೀಡಿದರು. ' ಆಂತರಿಕ ಪಯಣ'ದ ಬಗ್ಗೆ ಸೋದರ ಸಿನ್ಹಾರವರು ಮಾತನಾಡಿ ಹೇಗೆ ನಮ್ಮ ಸಾಧನೆಯು ನಮ್ಮನ್ನು ಕೆಳಸ್ತರದಿಂದ ಮೇಲಿನ ಸ್ತರಕ್ಕೆ ಕರೆದೊಯ್ಯುತ್ತದೆ ಎಂದು ತಿಳಿಸಿದರು. ಸೋದರ ಶ್ರೀವಾಸ್ತವರವರು ಪ್ರಪಂಚದ ಪರಿವರ್ತನೆಯ ಅವರ ಸ್ವಪ್ನದ ಭಾಗಿಯಾಗಲು 'ಪ್ರೇಮ ಮತ್ತು ಭ್ರಾತೃತ್ವ'ವನ್ನು ಬೆಳೆಸಿಕೊಳ್ಳುವ ಮತ್ವವನ್ನು ಕುಱಿತು ಮಾತನಾಡಿದರು. ಸೋದರ ಅವಿನಾಶ್ ಮತ್ತು ಸೋದರ ರಾಜೇಶ್‌ರವರು ' ಗುರುಗಳ ಮೇಲಿನ ಪ್ರೇಮ'ವು ಶೀಘ್ರ ಆಧ್ಯಾತ್ಮಿಕ ಪ್ರಗತಿಗೆ ಕಾರಣ ಎಂಬುದನ್ನು ವ್ಯಕ್ತಪಡಿಸಿದರು. ಪ್ರೇಮವನ್ನು ಅದರ ಸಮಂಜಸವಾದ ಮತ್ತು ಸಹಜ ವಿಷಯವಾದ 'ದೇವರು' ಕಡೆಗೆ ತಿರುಗಿಸಬೇಕು. ವಲಯಾಧಿಕಾರಿ ಸೋದರ ವಿಕಲ್ಪ್‌ರವರು ಅನೇಕ ಸ್ಫೂರ್ತಿದಾಯಕ ಪವರ್‌ಪಾಯಿಂಟ್ ಪ್ರಸ್ತುತಿಗಳು, ಕಿರುಚಿತ್ರಗಳು, ಮತ್ತು ನವೀನರೀತಿಯ ಕ್ವಿಜ್‌ಗಳನ್ನು ನಡೆಸಿಕೊಡುವ ಮೂಲಕ ಕಾರ್ಕ್ರಮವನ್ನು ಮುಕ್ತಾಯಗೊಳಿಸಿದರು. ಆಧ್ಯಾತ್ಮಿಕ ಪ್ರಗತಿಯ ಬಗ್ಗೆ ನಡೆಸಿದ ಪಾರಸ್ಪರಿಕ ಚರ್ಚೆಯೂ ಸಹ ಅಭ್ಯಾಸಿಗಳಿಗೆ ಸಹಾಯಕವಾಯಿತು. ಈ ಕೂಟದಲ್ಲಿ ಎಂದಿನ ಪೂರ್ಣದಿನದ ಕಾರ್ಯಕ್ರಮಕ್ಕಿಂತಲೂ ಹೆಚ್ಚಾಗಿ ಸುಮಾರು 400 ಅಭ್ಯಾಸಿಗಳು ಪಾಲ್ಗೊಂಡರು.



## ಮಹಾರಾಷ್ಟ್ರದ ನಾಗಪುರದಲ್ಲಿ ಅಭ್ಯಾಸಿ ತರಬೇತಿ ಕಾರ್ಯಕ್ರಮ

ಜೂನ್ 28, 2009ರಂದು ನಾಗಪುರ ಕೇಂದ್ರವು ಒಂದು ದಿನದ ಅಭ್ಯಾಸಿ ತರಬೇತಿ ಕಾರ್ಯಕ್ರಮವನ್ನು ವಿದರ್ಭಾ ಪ್ರದೇಶದ ಅಭ್ಯಾಸಿಗಳಿಗಾಗಿ ಆಯೋಜಿಸಿತ್ತು. ಕಾರ್ಯಕ್ರಮವನ್ನು ನಡೆಸಿಕೊಡಲು ನಾಸಿಕ್ ಕೇಂದ್ರದಿಂದ ಸೋದರಿ ಅನಸೂಯಾ ರಾಮಚಂದ್ರನ್‌ರವರು ಭೇಟಿ ನೀಡಿದ್ದರು.

ಪೂರ್ಣ ದಿನವೂ ಅಭ್ಯಾಸಿಗಳ ಉತ್ಸಾಹವನ್ನು ಕಾಯ್ದಿರಿಸುವಂತಹ ಪಾರಸ್ಪರಿಕ ಚರ್ಚೆಗಳನ್ನೊಳಗೊಂಡ ಈ ಕಾರ್ಯಕ್ರಮದಲ್ಲಿ ನಾಗಪುರ ಮತ್ತು ಹತ್ತಿರದ ಏಳು ಕೇಂದ್ರದ ಸುಮಾರು 30 ಅಭ್ಯಾಸಿಗಳು ಪಾಲ್ಗೊಂಡಿದ್ದರು.

ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ ಸೋದರಿ ಅನಸೂಯಾರವರು ಅಭ್ಯಾಸಿಗಳ ಅನುಮಾನಗಳನ್ನು ಪರಿಹರಿಸಿದರು. ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ದೊರಕಿದ್ದು ಅವರು ತಮ್ಮ ಆಲೋಚನೆಗಳು ಮತ್ತು ಅನುಭವಗಳನ್ನು ಪ್ರತಿಕ್ರಿಯಾ ನಮೂನೆಯಲ್ಲಿ ಉಲ್ಲೇಖಿಸಿದರು. ಎಲ್ಲಾ ಅಭ್ಯಾಸಿಗಳೂ ಕಾರ್ಯಕ್ರಮದ ವಿಷಯವನ್ನು ಶ್ಲಾಘಿಸಿ ಇಂತಹ ಕಾರ್ಯಕ್ರಮಗಳನ್ನು ನಿಯಮಿತವಾಗಿ ನಡೆಸಬೇಕೆಂದು ಅಭಿಪ್ರಾಯ ಪಟ್ಟರು. ಕೆಲವು ಅಭ್ಯಾಸಿಗಳು ಮಿಷನ್ನಿನಲ್ಲಿ ಒಂದು ವರ್ಷಕ್ಕೂ ಮಿಗಿಲಾಗಿ ಸಾಧನೆ



ಮಾಡುವವರು ಸಲುವಾಗಿಯೂ ಇಂತಹ ಕಾರ್ಯಕ್ರಮಗಳನ್ನು ನಡೆಸಿಕೊಡಬೇಕೆಂದು

ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ
ವಲಯ ಸುತ್ತುವರಿ
ಸೆಪ್ಟಂಬರ್ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 5

## ಉತ್ತರ ಕರ್ನಾಟಕದ ಮುಕ್ತ ಸಭೆಗಳು

ಕಳೆದ ಕೆಲವು ತಿಂಗಳುಗಳಿಂದ ಉತ್ತರ ಕರ್ನಾಟಕದಲ್ಲಿ ಅನೇಕ ಮುಕ್ತಸಭೆಗಳು ಆಯೋಜಿಸಲ್ಪಟ್ಟವು. ಈ ಸಭೆಗಳು ಬ್ಯಾಡಗಿ, ಹಾವೇರಿ, ರಾಣಿಬೆನ್ನೂರು, ಗದಗಮತ್ತು ಗುಲ್ಬರ್ಗಾದಲ್ಲಿ ನಡೆದವು. ಸೋದರ ಕಾಶಂಪುರ್‌ಕರ್, ಸೋದರ ಗಜೇಂದ್ರ ಮತ್ತು ಸೋದರಿ ಸುಜಾತಾರವರು ಗುರು, ಮಿಷನ್ ಮತ್ತು ಪದ್ಧತಿಯನ್ನು ಒಳಗೊಂಡಂತೆ ಸಹಜ ಮಾರ್ಗದ ಅನೇಕ ವಿಷಯಗಳ ಬಗ್ಗೆ ಮಾತನಾಡಿದರು. ಈ ಸಭೆಗಳಿಗೆ ಉತ್ತಮ ಪ್ರತಿಕ್ರಿಯೆ ದೊರೆತಿದ್ದು ಅನೇಕರು ಪದ್ಧತಿಯನ್ನು ಅನುಸರಿಸಲು ಆಸಕ್ತಿ ತೋರಿದ್ದಾರೆ.



ಗುಲ್ಬರ್ಗಾದ ಮದರ್ ತೆರೇಸಾ ಡಿ.ಎಡ್ ಕಾಲೇಜಿನಲ್ಲಿ ಜುಲೈ 5 ರಂದು ಸೋದರ ಗೌತಮ್ ಅಲ್ಲಿಪುರ್ ಮತ್ತು ಸೋದರ ಮಹೇಶ್ ದೇಶಪಾಂಡೆರವರು ಈ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಸುಮಾರು 100 ವಿದ್ಯಾರ್ಥಿಗಳು ಹಾಜರಿದ್ದರು. ಅವರೆಲ್ಲರೂ ಗಮನವಿಟ್ಟು ಆಲಿಸಿ ನಂತರ ಅನೇಕ ಪ್ರಶ್ನೆಗಳನ್ನು ಮುಂದಿಟ್ಟಾಗ ಉಪನ್ಯಾಸಕರು ಅವರ ಅನುಮಾನಗಳನ್ನು ಪರಿಹರಿಸಿದರು.



ಹಾವೇರಿ ಜಿಲ್ಲೆಯ **ಬ್ಯಾಡಗಿ**ಯಲ್ಲಿ ರಾಣಿಬೆನ್ನೂರಿನಿಂದ ಸುಮಾರು 20 ಕಿ.ಮೀ. ದೂರದ ಎಮ್‌ಡಿಹೆಚ್ ಶಾಲೆಯಲ್ಲಿ ಬಹುಪಾಲು ಶಿಕ್ಷಕರೇ ಇರುವ 20–30 ಆಕಾಂಕ್ಷಿಗಳಿಗಾಗಿ ಕಾರ್ಯಕ್ರಮವನ್ನು ಏರ್ಪಾಡು ಮಾಡಲಾಗಿತ್ತು. ಮುಖ್ಯೋಪಾಧ್ಯಾಯಿನಿಯು ಸಮಾಜದಲ್ಲಿ ಮೌಲ್ಯಗಳನ್ನು ಮರಳಿ ತರಲು ಸಹಜಮಾರ್ಗದಂತಹ ಪದ್ಧತಿಯನ್ನು ಅನುಸರಿಸುವ ವಿವೇಚನೆಯ ಕುರಿತು ಮಾತನಾಡಿದರು. ಅವರು ಪದ್ಧತಿಯ ವೈಚಾರಿಕ ಪರಿಚಯದ ನಂತರ ಹಾಜರಿರುವವರು ಸಾಧನೆಯಲ್ಲಿಯೂ ತೊಡಗಬೇಕೆಂದು ಒತ್ತಿ ಹೇಳಿದರು.



ಹುಬ್ಬಳ್ಳಿಯಿಂದ 75 ಕಿ.ಮೀ. ದೂರದ **ಹಾವೇರಿ**ಯ ಸಮುದಾಯ ಭವನದಲ್ಲಿ ಜೂನ್ 27ರಂದು ಸೋದರಿ ಸುಜಾತಾ ಕೇಶವರವರು ಮುಕ್ತಸಭೆಯೊಂದನ್ನು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ 25–30 ಭಾಗಿಗಳು ಉಪಸ್ಥಿತರಿದ್ದರು. ಬಹುತೇಕ ಮಹಿಳೆಯರು ಮತ್ತು ಕೆಲವು ಗಂಡಸರಿದ್ದು ಇದೊಂದು ಸಭ್ಯ ಕೂಟವಾಗಿತ್ತು. ಕಾರ್ಯಕ್ರಮದ ಏರ್ಪಾಡಿಗೆ ತನ್ನ ಸ್ಥಳೀಯ ಜೊತೆಗಾರರೊಂದಿಗೆ ಸಹಕಾರಿಯಾದ ದಾವಣಗೆರೆಯ ವಿನಾಯಕ್ ಎಂಬ ಯುವ ಅಭ್ಯಾಸಿಯು ಸಹಜಮಾರ್ಗದಲ್ಲಿ ತನ್ನ ಅನುಭವಗಳು ಮತ್ತು ಬದಲಾವಣೆಯ ಬಗ್ಗೆ ಗುರುಗಳ ಅನಿಸಿಕೆಯ ಬಗ್ಗೆ ನಿರರ್ಗಳವಾಗಿ ಮಾತನಾಡಿದರು. ಹಾವೇರಿಯಲ್ಲಿ ಮಾಹಿತಿ ಅಧಿಕಾರಿಯಾದ ಸೋದರ ಮಾಯಾಚಾರ್‌ರವರು ಈ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದರು.





ಹಾವೇರಿಯಿಂದ 40 ಕಿ.ಮೀ. ದೂರದ **ರಾಣಿಬೆನ್ನೂರು** ಹಾವೇರಿಜಿಲ್ಲೆಯ ಪ್ರಮುಖ ಸ್ಥಳವಾಗಿದೆ. ಯುವಜನ ಮತ್ತು ಯುವ ಸಾಧಕರನ್ನು ಹೊಂದಿರುವ ಅಂತರರಾಷ್ಟ್ರೀಯ ಕಿರಿಯರ ಸಂಸ್ಥೆ (ಜೆಸಿಐ) ಸ್ಥಳೀಯ ವಿಭಾಗದ ಸಹಯೋಗದೊಂದಿಗೆ ಮುಕ್ತಸಭೆಯನ್ನು ಅಯೋಜಿಸಲಾಗಿತ್ತು. ಬಹುಪಾಲು ಜೆಸಿಐ ಸದಸ್ಯರನ್ನು ಒಳಗೊಂಡಂತೆ ಸುಮಾರು 35 ಜನ ಭಾಗವಹಿಸಿದ್ದರು. ಸಹಜಮಾರ್ಗ ಪದ್ಧತಿಯಂತೆ ಧ್ಯಾನ ಎಂಬುದು ಅಂದಿನ ವಿಷಯವಾಗಿತ್ತು. ಸ್ವತಃ ವೈದ್ಯರಾದ ಜೆಸಿಐನ ಅಧ್ಯಕ್ಷರು ಧ್ಯಾನದ ವಿಚಾರ ಮತ್ತು ಇಂದಿನ ಮಾನವ ಪರಿವರ್ತನೆಯ ಅಗತ್ಯವನ್ನು ಸ್ವೀಕರಿಸುತ್ತಾ ಮುಕ್ತಾಯಗೊಳಿಸಿದರು.

**ಗುಲ್ಬರ್ಗಾ**ದಲ್ಲಿ ಜುಲೈ 6ರಂದು ಸೋದರಿ ಹರಿಕುಮಾರಿ ಚಾವಡಾರವರ ಮನೆಯಲ್ಲಿ ಕೂಟವೊಂದನ್ನು ಏರ್ಪಡಿಸಲಾಗಿತ್ತು. ಬಹುಪಾಲು ಗುಜರಾತಿ ಸಮುದಾಯದ ಮಹಿಳೆಯರನ್ನೊಳಗೊಂಡ ಈ ಕಾರ್ಯಕ್ರಮದಲ್ಲಿ ಸುಮಾರು 19 ಆಕಾಂಕ್ಷಿಗಳು ಹಾಜರಿದ್ದರು. ಸೋದರಿ ಹರಿಕುಮಾರಿಯವರು ಸಹಜಮಾರ್ಗದ ಪರಿಚಯ ಮಾಡಿಕೊಟ್ಟರೆ ಸೋದರಿ ಲಕ್ಷ್ಮಿ ಚೌಹಾಣ್‌ರವರು ಸಹಜಮಾರ್ಗ ಏತಕ್ಕಾಗಿ, ಆಧ್ಯಾತ್ಮ ಏತಕ್ಕಾಗಿ, ಜೀವಂತ ಗುರುಗಳ ಮಹತ್ವ ಮುಂತಾದವುಗಳ ಬಗ್ಗೆ ಮಾತನಾಡಿದರು. ಸೋದರಿ ರಮೋಲಾ ಚಾವಡಾರವರು ಶುದ್ಧೀಕರಣದ ಬಗ್ಗೆ ಮಾತನಾಡಿದರು. ಪಾರಿವಾರಿಕ ವಾತಾವರಣದಲ್ಲಿ ಇದನ್ನು ನಡೆಸಲಾಯಿತು. ಹೆಚ್ಚಿನವರು ಗುಜರಾತಿಯನ್ನೇ ಬಲ್ಲವರಾದ್ದರಿಂದ ಎಲ್ಲಾ ಉಪನ್ಯಾಸಗಳನ್ನು ಗುಜರಾತಿ ಭಾಷೆಯಲ್ಲಿಯೇ ನಡೆಸಿಕೊಡಲಾಗಿತ್ತು.

"ನಿಮಗೆ ಯಾವುದೇ ಕಷ್ಟ ಅಥವಾ ಗೋಜಲು ಎದುರಾದಲ್ಲಿ, ಅಥವಾ ಅಸಹನೀಯ ಭಾವಾತಿರೇಕ ಉಂಟಾದಾಗಲೂ, ಯಾವುದೇ ಸಮಯದಲ್ಲಿ, ಯಾವುದೇ ಸ್ಥಳದಿಂದ ಅದನ್ನು ಅವರಿಗೆ ಒಪ್ಪಿಸಿರಿ, ಹಾಗೂ ಅದು ಕೂಡಲೇ ಹೊರಟುಹೋಗುವುದು"

–ದಜ಼್ ಸ್ಪೀಕ್ಸ್ ಬಾಬೂಜಿ, ಪುಟ 32



ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ
ವಲಯ ಸುತ್ತುವರಿ
ಸೆಪ್ಟೆಂಬರ್ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 5

## ಮೌಲ್ಯಾಧಾರಿತ ಶಿಕ್ಷಣ ಪದ್ಧತಿಯ ಪ್ರಾರಂಭ – ಸೋಲಾಪೂರ, ಮಹಾರಾಷ್ಟ್ರ



ಸೋಲಾಪೂರ ಕೇಂದ್ರವು SMRTI ಯ ಪಠ್ಯಕ್ರಮದ ಪ್ರಕಾರ 1 ರಿಂದ 7 ನೇ ವರ್ಗದ ಮಕ್ಕಳಿಗೆ ಮೌಲ್ಯಾಧಾರಿತ ಆಧ್ಯಾತ್ಮಿಕ ಶಿಕ್ಷಣವನ್ನು ಕಲಿಸುವ ಪ್ರಯತ್ನವನ್ನು ಹೊಸದಾಗಿ ಪ್ರಾರಂಭಿಸಿತು. ಇದನ್ನು ಪ್ರತಿ ತಿಂಗಳಲ್ಲಿ ಒಂದು ರವಿವಾರದಂತೆ ಒಂದು ವರ್ಷದ ಕಾಲಾವಧಿಯಲ್ಲಿ ಪೂರ್ಣಗೊಳಿಸಲಾಗುವದು.

ದಿ. 12ನೇ ಜುಲೈ 2009 ರಂದು ಸಿಂಧೂವಿಹಾರ ವಿಭಾಗದಲ್ಲಿ ವಾಸಿಸುವ ಮಕ್ಕಳನ್ನು ನಮ್ಮ ಧ್ಯಾನಮಂದಿರಕ್ಕೆ ಕರೆದೊಯ್ಯಲಾಯಿತು. ವೃತ್ತಿಯಿಂದ ಶಿಕ್ಷಕಿಯರಾದ ಸಹೋದರಿ ಶುಭದಾ ಹಾಗು ಛಾಯಾ ರವರು, 59 ಮಕ್ಕಳಿಗೆ ವಿಡಿಯೋ ಕಥೆಗಳ ಮೂಲಕ ಕಠಿಣ ಪರಿಶ್ರಮದ ಮಹತ್ವ, ಏಕತೆ, ಬಂಧುಭಾವ ಸ್ನೇಹ ಮತ್ತು ಹಂಚಿಕೊಳ್ಳುವುದು ಈ ವಿಷಯಗಳನ್ನು ಕಲಿಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಸಹೋದರಿ ಸ್ನೇಹಲ್‌ರವರು ಸಹಾಯ ಮಾಡಿದರು. ಮಕ್ಕಳಿಗೆ ಅವರಿಗೆ ತೋರಿಸಲಾದ ಕಥೆಗಳಲ್ಲಿರುವ ನೀತಿಮತ್ತೆಯನ್ನು ವಿವರಿಸಲು ಕೇಳಲಾಯಿತು. ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿದ ವಿಷಯವೆಂದರೆ, ಒಂದು ವೇಳೆ ಅವರಿಗೆ ಅವಕಾಶ ಸಿಕ್ಕರೆ, ಹಿರಿಯರಿಗಿಂತಲು ಹೆಚ್ಚು ಪರಿಣಾಮಕಾರಿಯಾಗಿ ಆ ಕಥೆಗಳಲ್ಲಡಗಿದ ನೀತಿಮತ್ತೆಯನ್ನು ವಿವರಿಸಬಲ್ಲರೆಂಬುದನ್ನು ತೋರಿಸಿಕೊಟ್ಟುದುದು.

ಶಾರೀರಿಕ ಶಿಕ್ಷಣದ ಮಹತ್ವ ಮತ್ತು ಅದರ ಅವಶ್ಯಕತೆಯ ಬಗ್ಗೆಯೂ ಹೇಳಿಕೊಟ್ಟಾಗ ಅದಕ್ಕೂ ಸಹ ವಿದ್ಯಾರ್ಥಿಗಳು ಸಕಾರಾತ್ಮಕ ಪ್ರತಿಸಾದವನ್ನಿತ್ತರು. ಯುವಕ ಸ್ವಯಂಸೇವಕರ ಪರವಾಗಿ, ಮುಂದಿನ ತಿಂಗಳಿಂದ ನೆರವೇರಿಸಲಾಗುತ್ತಿರುವ ಶಾರೀರಿಕ ಪ್ರಶಿಕ್ಷಣ ಕಾರ್ಯಕ್ರಮಕ್ಕಾಗಿ ಅವರು ತಮ್ಮ ಹೆಸರನ್ನು ನೋಂದಾಯಿಸಿಕೊಂಡರು. ಈ ಸತ್ರದಲ್ಲಿಯ ಮಕ್ಕಳ ಉತ್ಸಾಹವು ನಮ್ಮ ಸ್ವಯಂಸೇವಕರಿಗೆ, ಮುಂದಿನ ಪೀಳಿಗೆಯನ್ನು ಅಣಿಗೊಳಿಸಲು ಇಂತಹ ಸತ್ರಗಳನ್ನು ಇನ್ನು ಮುಂದೆಯೂ ಆಯೋಜಿಸಲು ಪ್ರೋತ್ಸಾಹಿಸಿತು. ಈ ಎಲ್ಲಾ ಮಕ್ಕಳು ಅಭ್ಯಾಸಿಗಳಲ್ಲದವರ ಕುಟುಂಬದವರಾಗಿದ್ದರೂ ನಮ್ಮ ಮಿಷನ್ನಿನ ಆಂಗ್ಲ ಪ್ರಾರ್ಥನೆಯನ್ನು ಕಲಿತುಕೊಂಡಿರುವ ವಿಷಯವು ಹೃದಯ ಸ್ಪರ್ಶಿಸುವಂತಹುದಾಗಿದೆ.

## ನಿವಾಸಿ ಶಿಬಿರ ವಲಯಾಶ್ರಮ, ತುಮಕುಂಟಾ, ಹೈದರಾಬಾದ.

ಸಾಧನೆಯನ್ನು ಐದು ವರ್ಷ ಪೂರ್ಣಗೊಳಿಸಿದ ಎಲ್ಲಾ ಅಭ್ಯಾಸಿಗಳಿಗಾಗಿ ಶುಕ್ರವಾರ ದಿ.7 ನೇ ಆಗಸ್ಟ್‌ದಿಂದ ರವಿವಾರ ದಿ. 9 ನೇ ಆಗಸ್ಟ್ 2009 ರ ವರೆಗೆ ನಿವಾಸಿ ಶಿಬಿರದ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ತೀವ್ರವಾದ ಸ್ಪರ್ಧಾತ್ಮಕ ಆಧುನಿಕಕಾಲದಲ್ಲಿ ಸಹಜಮಾರ್ಗ ಪದ್ಧತಿಯ ಜೀವನಕ್ರಮವನ್ನು ಅಂತರ್ಮುಖವಾಗಿ ಪರಿಶೀಲಿಸಿಕೊಳ್ಳಲು, ನಿಯಮಿತವಾಗಿ ನಿಗದಿಪಡಿಸಿದ ಪ್ರಕಾರ ಸಾಧನೆಯನ್ನು ಮಾಡುವವರ ಇಂಗಿತವನ್ನು ಸಣ್ಣ ಸಣ್ಣ ಗುಂಪುಗಳಲ್ಲಿ ಚರ್ಚಿಸಿ, ತಾವು ಆಸಕ್ತಿಯಿಂದಲೂ, ಸಮರ್ಪಿತಭಾವನೆಯಿಂದಲೂ ಸಾಧನೆಯನ್ನು ಮಾಡುವುದಕ್ಕಾಗಿ ತಮ್ಮ ಕಾರ್ಯಕ್ರಮಪಟ್ಟಿಯನ್ನು ತಯಾರಿಸಿಕೊಳ್ಳಲು ಅನುಕೂಲಮಾಡಿಕೊಡುವುದೇ ಈ ಶಿಬಿರದ ಉದ್ದೇಶವಾಗಿತ್ತು.

ಒತ್ತಡದ ಜೀವನಶೈಲಿ, ಕೆಲಸದ ರಾತ್ರಿಸರದಿ, ಮನೋವೃತ್ತಿಯಸಮಸ್ಯೆ, ಮನಃಶಕ್ತಿಯ ಅಭಾವ ಅಥವಾ ಆಲಸ್ಯ ಮುಂತಾದ ತೊಂದರೆಗಳಿಂದಾಗಿ ಸಾಧನೆಯನ್ನು ನಿಯಮಿತವಾಗಿ ಮಾಡಲಾಗದ 18 ಯುವ ಅಭ್ಯಾಸಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಆಶ್ರಮದಲ್ಲಿ ಎಲ್ಲರೂ ಒಂದೆಡೆಗೆ ಇದ್ದು, ಸಹಜಮಾರ್ಗ ಪದ್ಧತಿಯ ಪ್ರಕಾರ ಜೀವನವನ್ನು ನಡೆಸುವಲ್ಲಿ ತಮಗಿದ್ದ ಸಮಸ್ಯೆಗಳಬಗ್ಗೆ ತಮ್ಮ ತಮ್ಮ ಭಾವನೆಗಳನ್ನು ಹಂಚಿಕೊಂಡರು. ಬಿಚ್ಚುಮನಸ್ಸಿನಿಂದ ಆದ ಚರ್ಚೆಗಳಿಂದ ಅವರ ಸಮಸ್ಯೆಗಳನ್ನು ತಾವೇ ಬಗೆಹರಿಸಿಕೊಳ್ಳುವಲ್ಲಿ ಸಹಾಯವಾಯಿತು. ಪ್ರಶಾಂತವಾದ ವಾತಾವರಣದಲ್ಲಿ ವೈಯಕ್ತಿಕ ಬೈಠಕುಗಳನ್ನು ನೆರವೇರಿಸಲಾಯಿತು. ಒಬ್ಬರಿಂದ– ಒಬ್ಬರಿಗೆ ಪದ್ಧತಿಯಿಂದಾಗಿ ಸಾಧನೆ ಸಂಬಂಧಿಸಿದ ಪ್ರಶ್ನೆಗಳನ್ನು ಚರ್ಚಿಸಲು ಸಾಕಷ್ಟು ಅವಕಾಶ ಹಾಗು ವೇಳೆ ಉಪಲಬ್ಧವಾಗಿತ್ತು.

ಇದರಲ್ಲಿ ಪಾಲ್ಗೊಂಡವರೆಲ್ಲರೂ ತಮಗೆ ವೈಯಕ್ತಿಕ ಬೈಠಕಿನಿಂದಲೂ ಹಾಗು ಇತರ ಅಭ್ಯಾಸಿ ಸಹೋದರ ಸಹೋದರಿಯರೊಂದಿಗೆ ಪರಸ್ಪರ ವಿಚಾರವಿನಿಮಯದಿಂದಲೂ ಅತಿಶಯ ಲಾಭವಾಯಿತೆಂದು ಪ್ರತಿಸಾದವನ್ನಿತ್ತರು. ಪ್ರತಿಯೊಬ್ಬರೂ ತಮ್ಮ ಸಾಧನೆಯಲ್ಲಿ ಸುಧಾರಣೆ ಮಾಡಿಕೊಳ್ಳುವುದಾಗಿ ಒಪ್ಪಿಕೊಂಡರು. ಇದರಲ್ಲಿ ಸಹಭಾಗಿಯಾದವರು ಸಾಧನೆಗೆ ಸಂಬಂಧವಾಗಿ ತಾವು ಮಾಡಿದ ಚರ್ಚೆಗಳಿಂದ ಪ್ರೇರಿತರಾಗಿ ಒಂದು ಅರ್ಥಪೂರ್ಣವಾದ ಕಿರು ನಾಟಕವನ್ನು ಪ್ರಸ್ತುತಪಡಿಸಿದರು. ಈ ಶಿಬಿರವು ರವಿವಾರ ಸಾಯಂಕಾಲ 6 ಗಂಟೆಗೆ ಸಹಭಾಗಿಯಾದವರು ಹಾಗು ಸಂಚಾಲಕರು ನೀಡಿದ ಅಭಿಪ್ರಾಯಗಳೊಂದಿಗೆ ಮುಕ್ತಾಯವಾಯಿತು.

## ಉಸ್ಮಾನಿಯಾ ವೈದ್ಯಕೀಯ ಕಾಲೇಜಿನಲ್ಲಿ ಚರ್ಚಾತ್ಮಕ ಕಾರ್ಯಶಾಲೆ.

4 ನೇ ಆಗಸ್ಟ 2009 ರಂದು ಹೈದರಾಬಾದ ಕೇಂದ್ರದ VBSE ತಂಡದ ಸದಸ್ಯರು ಉಸ್ಮಾನಿಯಾ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳಿಗಾಗಿ 3 ಗಂಟೆ ಕಾಲದ ಚರ್ಚಾತ್ಮಕ ಕಾರ್ಯಶಾಲೆಯೊಂದನ್ನು ನೆರವೇರಿಸಿದರು. ಈ ವೈದ್ಯಕೀಯ ಕಾಲೇಜಿನಲ್ಲಿ ಹೊಸದಾಗಿ ಸೇರಿಕೊಂಡ 200 ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಮೊದಲನೆಯ ವಕ್ತಾರರು "ಪ್ರಮಾಣಬದ್ಧವಾದ ಜೀವನ"ದ ಬಗ್ಗೆ ದಿನನಿತ್ಯದ ಸಣ್ಣ ಸಣ್ಣ ಉದಾಹರಣೆಗಳೊಂದಿಗೆ ಚರ್ಚಿಸಿದರು. ಎರಡನೆಯ ವಕ್ತಾರರು, ವೈಯಕ್ತಿಕ ಗುರಿಯನ್ನಿಟ್ಟುಕೊಳ್ಳುವ ಆವಶ್ಯಕತೆ ಹಾಗು ಅದನ್ನು ಅಳವಡಿಸಿಕೊಳ್ಳುವ ರೀತಿಯ ಬಗ್ಗೆ ಪ್ರತಿಪಾದಿಸಿದರು. ಅವರು ಯೋಗ್ಯಮನೋಭಾವ, ಧೈರ್ಯ ಮತ್ತು ಮನಸ್ಸಿನ ಸುನಿಯಂತ್ರಣದ ಪಾತ್ರಗಳ ಬಗ್ಗೆಯೂ ಚರ್ಚಿಸಿದರು. ಈ ಕಾರ್ಯಕ್ರಮ ಪುಟ್ಟ ವೀಡಿಯೊ ಪ್ರದರ್ಶನದೊಂದಿಗೆ ಮುಕ್ತಾಯವಾಯಿತು.

ಪ್ರಾರಂಭದಲ್ಲಿ ವಿದ್ಯಾರ್ಥಿಗಳ ಪ್ರತಿಸಾದ ಸೌಮ್ಯವಾಗಿತ್ತು.(ಇಂದು ಅವರ ವೈದ್ಯಕೀಯ ಕಾಲೇಜಿನ ಕೇವಲ ಎರಡನೇಯ ದಿನವಾಗಿತ್ತು.) ಆದರೆ ಆಮೇಲೆ ಸರಿಹೊಂದಿಕೊಂಡರು.

ಸರ್ವಸಾಮಾನ್ಯವಾಗಿ ಎಲ್ಲರೂ ಈ ಕಾರ್ಯಕ್ರಮದಲ್ಲಿ ಭಾಗಿಯಾಗಿರುವುದಕ್ಕಾಗಿ ಕೃತಜ್ಞತೆ ಹಾಗು ಸಂತೋಷವನ್ನು ವ್ಯಕ್ತಪಡಿಸಿದರು.

ಅದಲ್ಲದೆ ಇತರ ಅನೇಕ ಪ್ರತಿಕ್ರಿಯೆಗಳೂ ಇದ್ದವು.

".....ಈ ಕಾರ್ಯಕ್ರಮವು ನನ್ನ ಜೀವನವನ್ನೇ ಬದಲಾಯಿಸಿತು."

".....ಬಹಳ ಸಂದಿಗ್ಧ ಪರಿಸ್ಥಿತಿಯಲ್ಲಿ ನನಗಿದು ದೊರಕಿತು."


".....ನಾನೇನಿರುವೆನೆಂಬುದನ್ನು, ಹಾಗು ಸಮಾಜದಲ್ಲಿ ನನ್ನ ಪಾತ್ರವೇನೆಂಬುದನ್ನು ತಿಳಿದುಕೊಳ್ಳುವಂತೆಮಾಡಿತು."

".....ನನ್ನ ಜೀವನದಲ್ಲಿ ಶಾಂತಿಯನ್ನು ತಂದಿತು."

".....ನನ್ನ ಆತ್ಮವು ಅತಿ ಮಹತ್ವದ್ದಾಗಿದೆ ಎಂಬುದನ್ನು ಕಂಡುಕೊಂಡೆ."

ಇಂತಹ ಕಾರ್ಯಕ್ರಮಗಳನ್ನು ಆಗಾಗ ಹಮ್ಮಿಕೊಳ್ಳಬೇಕೆಂದು ಅನೇಕ ಬೇಡಿಕೆಗಳು ಬಂದುವು. ಅತ್ಯಂತ ಹೃದಯಸ್ಪರ್ಶಿ ಪ್ರತಿಸಾದ ವೆಂದರೆ, ಇಂತಹ ಕಾರ್ಯಕ್ರಮಗಳನ್ನು ಇತರ ಶಾಲಾ ಕಾಲೇಜುಗಳಲ್ಲಿ, ವಿಶೇಷವಾಗಿ ಹಳ್ಳಿಗಳಲ್ಲಿ ಮತ್ತು ಸಣ್ಣ ಸಣ್ಣ ಪಟ್ಟಣಗಳಲ್ಲಿ ಆಯೋಜಿಸಬೇಕೆಂಬ ಬೇಡಿಕೆಗಳು ಹಾಗು ಅವರು ಇತರರಿಗಾಗಿ ಪಡುತ್ತಿರುವ ಕಳವಳದ ಭಾವನೆಗಳು.









## ದೆಹಲಿ ಆಶ್ರಮ – ಆರ್. ಕೆ. ಪುರಮ್

ದೆಹಲಿ ಕೇಂದ್ರವು 1958 ರಲ್ಲಿ ಸ್ಥಾಪಿತವಾಗಿದ್ದು, ದೇಶದ ರಾಜಧಾನಿ ಯಾಗಿದ್ದ ನಗರದಲ್ಲಿ ಎಷ್ಟೋ ಕಾಲದವರೆಗೆ ಮಿಷನ್ನಿನ ಕಾರ್ಯಚಟುವಟಿಕೆಗಳಿಗಾಗಿ ಒಂದು ನಿರ್ಧಾರಿತ ಸ್ಥಾನವಿರಲಿಲ್ಲ. ದಿ. 6 ನೇ ನವೆಂಬರ್ 1986 ರಲ್ಲಿ S.R.C.M. ದೆಹಲಿ ಪ್ರಶಾಸನ ದಿಂದ ದಕ್ಷಿಣ ದೆಹಲಿಯ ಆರ್.ಕೆ. ಪುರಮ್ ದಲ್ಲಿಯ 4 ನೇ ಸೆಕ್ಟರ್ ನಲ್ಲಿ 900 ಚ.ಗಜ ದ ಒಂದು ಪ್ಲಾಟನ್ನು ಪಡೆದುಕೊಂಡಿತು.ಇದು ಮಿಷನ್ನನ್ನು ಯೋಗಶಾಸ್ತ್ರ ಪ್ರಶಿಕ್ಷಣವನ್ನೀಯುವ ಶೈಕ್ಷಣಿಕ ಸಂಸ್ಥೆ ಎಂದು ಶಾಸಕೀಯ ಮಂಜೂರಿಯನ್ನಿತ್ತ ಭಾರತ ಸರಕಾರದ ಶಿಕ್ಷಣ ಹಾಗು ಸಾಂಸ್ಕೃತಿಕ ಖಾತೆಯ ಶಿಫಾರಸ್ಸಿನ ಮೇರೆಗೆ ಪಡೆಯಲಾಯಿತು. 19ನೇ ನವೆಂಬರ್ 1986 ರಂದು ಪೂಜ್ಯ ಗುರುಗಳು ಈ ಜಾಗವನ್ನು ವೀಕ್ಷಿಸಿ ಆ ಪರಿಸರದಲ್ಲಿ ತಮ್ಮ ಪತ್ನಿ ಸಹೋದರಿ ಸುಲೋಚನಾ(ಮಾಮಿ) ಯವರೊಂದಿಗೆ ಸಸಿಯೊಂದನ್ನು ನೆಟ್ಟರು.

1987 ರ ಬಸಂತಪಂಚಮಿ, 3ನೇ ಫೆಬ್ರುವರಿ ಯಂದು, ಗುರುಗಳು ಈ ಆಶ್ರಮದ ಶಿಲಾನ್ಯಾಸವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಅವರು "ಪ್ರೇಮವು ರೂಪದಲ್ಲಿರದೆ ಅದರ ಒಳಗಡೆ ಇರುತ್ತದೆ. ಅಂಗಡಿಯಲ್ಲಿ ಏನನ್ನಾದರೂ ಕೊಂಡುಕೊಂಡರೆ, ಅದು ಎಷ್ಟೇ ಉತ್ತಮವಾದ ಹೊದಿಕೆಯಲ್ಲಿದ್ದರೂ ಅದರಲ್ಲಿರುವ ವಸ್ತುವಿಗೇ ಮಹತ್ವವಿರುತ್ತದೆಯೇ ಹೊರತು ಹೊದಿಕೆಗೆ ಇರುವುದಿಲ್ಲ. ಹೊರಭಾಗವನ್ನು ಈ ಆಧುನಿಕ ಸಮಾಜದಲ್ಲಿ, ಒಗೆದುಬಿಡುತ್ತಾರೆ. ನಾವು ಒಳಭಾಗವನ್ನೇ ಬಯಸುತ್ತೇವೆ. ಗುರುಗಳು ಬಯಸುವುದೂ ಅದೇ. ನಮ್ಮ ಒಳಗಿನದು."

ಈ ಆಶ್ರಮದ ರಚನೆಯನ್ನು ಜರ್ಮನಿಯ ವಾಸ್ತುಶಿಲ್ಪಿ ಸಹೋದರ ಓಟ್ಟೊ ಸ್ಟೇಡ್ಲ್ ರವರು ತಯಾರಿಸಿದರು. ಈ ಯೋಜನೆ 1987 ರಲ್ಲೇ ತಯಾರಾಗಿದ್ದರೂ ಇದರ ಮಂಜೂರಾತಿ ಸಿಗಲು ಬಹಳವೇ ತಡವಾದುದರಿಂದ, 1989 ರ ಅಕ್ಟೋಬರ್ ನಲ್ಲಿ ಕಟ್ಟಡದ ಕೆಲಸ ಪ್ರಾರಂಭವಾಗುವವರೆಗೆ, ಸತ್ಸಂಗವು ಇದೇ ಸ್ಥಳದಲ್ಲಿ ಶಾಮಿಯಾನಾದಲ್ಲಿ ನಡೆಯುತ್ತಿತ್ತು. ಪೂಜ್ಯ ಗುರುಗಳು ತಾವು ಸಹೋದರ ಎಂ.ಎಂ.ಕಪೂರ್ ಅವರ ಸಫದರ್ ಜಂಗ ಎನ್‌ಕ್ಲೇವ್‌ನಲ್ಲಿರುವ ನಿವಾಸದಲ್ಲಿ ತಂಗಿರುತ್ತಿದ್ದಾಗ ಚಿಗರೆಗಳ ಉದ್ಯಾನವನ್ನು ದಾಟಿಕೊಂಡು, ಈ ಜಾಗಕ್ಕೆ ನಡೆದಾಡಲು ಹೋಗುತ್ತಿದ್ದರು. ಅವರು ವಿದೇಶಿ ಅಭ್ಯಾಸಿಗಳಿಗೆ ಅಲ್ಲಿ ಮುಕ್ತವಾಗಿ ಒಡಾಡಿಕೊಂಡಿರುತ್ತಿದ್ದ ನವಿಲುಗಳನ್ನು ತೋರಿಸುತ್ತಿದ್ದರು. ಒಂದುಸಲ ಸುಂದರವಾದ ತನ್ನ ಎಲ್ಲಾ ಪುಕ್ಕಗಳನ್ನು ಹರಡಿಕೊಂಡು, ಇದರ ವರ್ಣರಂಜಿತ ಮುಂದಿನ ಭಾಗವನ್ನು ಅಭ್ಯಾಸಿಗಳಿಗೆ ತೋರಿಸಲೆಂದು ಬಯಸಿದ ಗುರುಗಳಕಡೆಗೆ ವಿರುದ್ಧ ದಿಶೆಯಲ್ಲಿನಿಂತ ನವಿಲಿಗೆ "ತಿರುಗು" ಎಂದು ಪಿಸುಗುಟ್ಟಿದಕೂಡಲೇ ಗುರುಗಳ ಅಪ್ಪಣೆಯನ್ನು ಪಾಲಿಸಿತು.

ನಿವೇಶನವು ಬಹಳ ಚಿಕ್ಕದಾದುದರಿಂದ ಈ ಕಟ್ಟಡವನ್ನು ನಾಲ್ಕು ಅಂತಸ್ತಿನಲ್ಲಿ ಕಟ್ಟಲಾಗಿದ್ದು, ತಳಭಾಗವು ಆಶ್ರಮಕ್ಕೆ ಭೇಟಿ ನೀಡುವ ಅಭ್ಯಾಸಿಗಳ ನಿವಾಸಕ್ಕಾಗಿ ಉಪಯೋಗಿಸಲಾಗುತ್ತದೆ. ಮೊದಲನೆಯ ಸತ್ಸಂಗವು ಈ ತಳಭಾಗದಲ್ಲಿ ದಿ. 13 ನೇ ಅಕ್ಟೋಬರ್ 1991 ರಂದು ಪೂಜ್ಯ ಗುರುಗಳಿಂದ ನಡೆಸಿ ಕೊಡಲಾಯಿತು. ಮೊದಲನೆಯ ಅಂತಸ್ತು ಮತ್ತು ಗ್ಯಾಲರಿಯಲ್ಲಿ ಧ್ಯಾನ ಮತ್ತು ಸಭೆಯ ವೇಳೆಯಲ್ಲಿ ಕುಳಿತುಕೊಳ್ಳಲು ಉಪಯೋಗಿಸಲಾಗುತ್ತದೆ. ಎರಡನೇಯ ಅಂತಸ್ತಿನಲ್ಲಿ ಪೂಜ್ಯ ಗುರುಗಳಿಗಾಗಿ ಎರಡು ಕೋಣೆಯ ನಿವಾಸಸ್ಥಾನವಿದೆ. ಇಲ್ಲಿ ಗುರುಗಳು ಮೊಟ್ಟಮೊದಲಬಾರಿಗೆ ದಿ.2 ನೇ ಡಿಸೆಂಬರ್1991 ರಂದು ತಂಗಿದ್ದರು.

ಮೊದಲನೆಯ ಅಂತಸ್ತಿನ ಕಾಂಕ್ರೀಟ್ ಮಾಡಲು ಕಬ್ಬಿಣದ ಸಲಾಕೆಗಳನ್ನು ಜೋಡಿಸುತ್ತಿರುವಾಗ ಗುರುಗಳು ಅದನ್ನು ವೀಕ್ಷಿಸಲು ಮೇಲೇರಿಹೋದರು. ಅಲ್ಲಿಯ ಒಂದು ತಂತಿಯತುಂಡು ಅವರ ಬೆರಳಿಗೆ ಚುಚ್ಚಿ ಕೊಂಚ ಗಾಯವಾಗಿ ರಕ್ತ ಬಂದಿತು. ಅದನ್ನವರು ಅತಿ ಹಗುರವಾಗಿ ತೆಗೆದು ಕೊಂಡು, "ನನಗೆ ಕೊಂಚ ಗಾಯವಾಗಿದ್ದುದು ಒಳ್ಳೆಯದಾಯಿತು. ಇಲ್ಲವಾದರೆ ಇಲ್ಲಿ ಕೆಲಸ ಮಾಡುವ ಯಾರಿಗಾದರೂ ದೊಡ್ಡಗಾಯವಾಗಬಹುದಾಗಿತ್ತು" ಎಂದರು.

1992 ರಲ್ಲಿ ಆಶ್ರಮದ ಕಟ್ಟಡ ಪೂರ್ಣವಾದನಂತರ ಸತ್ಸಂಗಗಳಲ್ಲಿ ಅಭ್ಯಾಸಿಗಳ ಸಂಖ್ಯೆ 40 ರಿಂದ 300 ವರೆಗೆ ಬೆಳೆಯಿತು. ಸ್ಥಳೀಯ ಅಭ್ಯಾಸಿಗಳು ಉದಾರವಾಗಿ ದೇಣಿಗೆಗಳನ್ನೂ ಹಾಗು ನಿಪುಣರನ್ನೂ ಪೂರೈಸಿದರು. ಈ ಆಶ್ರಮವು ಗುರುಗಳ ಉತ್ತರಭಾರತದ ಮತ್ತು ವಿದೇಶ ಪ್ರವಾಸದ ವೇಳೆಯಲ್ಲಿ ತಂಗುಸ್ಥಾನವಾಗಿ ಸೇವೆ ಸಲ್ಲಿಸುತ್ತಿದೆ. 1998 ರಲ್ಲಿ ಇಂದ್ರಪ್ರಸ್ಥ ಸ್ಟೇಡಿಯಮ್ ನಲ್ಲಿ ಜರುಗಿದ ಸದ್ಗುರುಗಳ ಹುಟ್ಟುಹಬ್ಬದ ಉತ್ಸವದವೇಳೆಯಲ್ಲಿ ಚಟುವಟಿಕೆಗಳ ಕೇಂದ್ರಸ್ಥಾನವಾಗಿತ್ತು. ಈ ಆಶ್ರಮ ಸಾಮಾನ್ಯವಾಗಿ ಆರ್. ಕೆ. ಪುರಮ್ ಆಶ್ರಮವೆಂದೇ ಗುರುತಿಸಲಾಗುತ್ತದೆ. ಇದಲ್ಲದೆ ನೆರೆಯ ರಾಜ್ಯವಾದ ಹರಿಯಾಣದ, ಗುರ್‌ಗಾಂವ್ ಎಂಬಲ್ಲಿಯ ಪಾಲಮ್ ಫಾರಮ್ ನಲ್ಲಿ ವಲಯಾಶ್ರಮವಿದೆ. ಇದನ್ನು ಜೂನ್ 15, 2001 ರಲ್ಲಿ ನೋಂದಾಯಿಸಲಾಯಿತು.





ಆರ್.ಕೆ. ಪುರಮ್ ಆಶ್ರಮವು ನವದೆಹಲಿಯ ರೈಲ್ವೆ ನಿಲ್ದಾಣದಿಂದ ಹಾಗು ಪಾಲಮ್ ವಿಮಾನ ನಿಲ್ದಾಣದಿಂದ ಸುಮಾರು 15 ಕಿ.ಮಿ.ಸಮಾನ ಅಂತರದಲ್ಲಿದೆ. ಅನುಕೂಲವಾದ ಸ್ಥಳದಲ್ಲಿದ್ದ ಕಾರಣ ಈ ಆಶ್ರಮವು ಸತ್ಪೋಲ್ ಆಶ್ರಮಕ್ಕೆ ಹೋಗಿಬರುವ ಅಭ್ಯಾಸಿಗಳಿಗೆ ಅನುಕೂಲಕರವಾಗಿ ಸೇವೆ ಸಲ್ಲಿಸುತ್ತಿದೆ.

**To download or subscribe to this newsletter, please visit http://www.sahajmarg.org/newsletter/india**
**For feedback, suggestions and news articles please send email to in.newsletter@srcm.org**

© 2009 Shri Ram Chandra Mission ("SRCM"). All rights reserved.
"Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.